

ಶ್‌!

ಹರಟೆ ಬೇಡ!

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

ಸಂಪರ್ಕ ಮಾಹಿತಿ
All Peoples Church & World Outreach,
319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

ಉಚಿತ ವಿತರಣೆಗಾಗಿ
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ "ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ" ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್ಗಳು
ಪ್ರಸಂಗಗಳು: apcwo.org/sermons | **ಪುಸ್ತಕಗಳು:** apcwo.org/books
ಚರ್ಚ್ ಆಪ್: apcwo.org/app | **ಸತ್ಯವೇದ ಕಾಲೇಜು:** apcbiblecollege.org
ಇ-ಕಲಿಕೆ: apcbiblecollege.org/elearn | **ಸಲಹಾ ಸೇವೆ:** chrysalislife.org
ಸಂಗೀತ: apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
ಏಪಿಸಿ ಪ್ರಪಂಚ ಸೇವೆಗಳು: apcworldmissions.org

(Kannada – Shhh! No Gossip!)

ಶ್!

ಹರಟೆ ಬೇಡ!

ಪರಿವಿಡಿ

1. ಹರಟೆ 1
2. ಹರಟೆಗೆ ಅವಕಾಶ ದೊರೆಯುವ ಹುದುವಾದ ಪರಿಸ್ಥಿತಿಗಳು 8
3. ಹರಟೆಯ ನಕಾರಾತ್ಮಕ ಪರಿಣಾಮಗಳು 15
4. ಹರಟೆಗೆ ವಿರುದ್ಧವಾಗಿ ದೇವರ ಗಂಭೀರವಾದ ನಿಲುವು 20
5. ನೀವು ಹರಟೆಯನ್ನು ಹೇಗೆ ನಿಭಾಯಿಸುತ್ತೀರಿ? 23
6. ಪ್ರಾರ್ಥನೆ 28

1
ಹರಟೆ

ಸತ್ಯವೇದದಲ್ಲಿ, ದಾವೀದನ ಕೀರ್ತನೆಯಾಗಿರುವ—ಕೀರ್ತನೆ 15—ಯಾವ ರೀತಿಯ ವ್ಯಕ್ತಿ ದೇವರೊಂದಿಗೆ ಸಂವಹಿಸಲು, ಆತನ ಪ್ರಸನ್ನತೆಯಲ್ಲಿ ವಾಸಿಸುತ್ತಾ, ಆತನನ್ನು ಆರಾಧಿಸಲು ಯೋಗ್ಯನು ಎಂಬದನ್ನು ವಿವರಿಸುತ್ತದೆ.

ಕೀರ್ತನೆಗಳು 15:1-5

[1]ಯೆಹೋವನೇ ನಿನ್ನ ಗುಡಾರದಲ್ಲಿ ಇಳುಕೊಂಡಿರುವದಕ್ಕೆ ಯೋಗ್ಯನು ಯಾವನು? ನಿನ್ನ ಪರಿಶುದ್ಧಪರ್ವತದಲ್ಲಿ ವಾಸಿಸತಕ್ಕವನು ಎಂಥವನಾಗಿರಬೇಕು?

[2]ಅವನು ಸಜ್ಜನನೂ ನೀತಿವಂತನೂ ಮನಃಪೂರ್ವಕವಾಗಿ ಸತ್ಯವಚನವನ್ನಾಡುವವನೂ ಆಗಿರಬೇಕು.

[3]ಅವನು ಚಾಡಿಯನ್ನು ಹೇಳದವನೂ ಮತ್ತೊಬ್ಬರಿಗೆ ಅನ್ಯಾಯಮಾಡದವನೂ ಯಾರನ್ನೂ ನಿಂದಿಸದವನೂ ಆಗಿರಬೇಕು.

[4]ಅವನು ಭ್ರಷ್ಟರನ್ನು ಜರಿದುಬಿಟ್ಟವನೂ ಯೆಹೋವನಲ್ಲಿ ಭಯಭಕ್ತಿಯುಳ್ಳವರನ್ನು ಸನ್ಮಾನಿಸುವವನೂ ನಷ್ಟವಾದರೂ ಪ್ರಮಾಣತಪ್ಪದವನೂ ಆಗಿರಬೇಕು.

[5]ಅವನು ಸಾಲಕ್ಕೆ ಬಡ್ಡಿ ಕೇಳದವನೂ ನಿರಪರಾಧಿಯ ಕೇಡಿಗಾಗಿ ಲಂಚತೆಗೆದುಕೊಳ್ಳದವನೂ ಆಗಿರಬೇಕು. ಇಂಥವನು ಎಂದಿಗೂ ಕದಲುವದಿಲ್ಲ.

ಈ ಕೀರ್ತನೆಯಲ್ಲಿ ಅಂಥ ವ್ಯಕ್ತಿಯ ಹಲವು ಗುಣಲಕ್ಷಣಗಳನ್ನು ಮುಖ್ಯವಾಗಿ ಈ ಕೀರ್ತನೆಯಲ್ಲಿ ತಿಳಿಸಲಾಗಿರುವದನ್ನು ನಾವು ನೋಡಬಹುದು, ಆದರೆ ನಾವು 3ನೇ ವಚನದ ಕಡೆಗೆ ಗಮನಹರಿಸೋಣ.

ಕೀರ್ತನೆಗಳು 15:3 (ಎನ್ ಎಲ್ ಟಿ ಬೈಬಲ್ ಪ್ರಕಾರ)
ಹರಟೆ ಮಾತುಗಳನ್ನಾಡಲು ಅಥವಾ ತಮ್ಮ ನೆರೆಯವರಿಗೆ ಕೇಡನ್ನುಂಟು ಮಾಡಲು ಅಥವಾ ತಮ್ಮ ಸ್ನೇಹಿತರ ವಿಷಯದಲ್ಲಿ ಕೆಟ್ಟದಾಗಿ ಮಾತನಾಡಲು ತಿರಸ್ಕರಿಸುವವರು.

ಹರಟೆ ಮಾತುಗಳನ್ನಾಡುವದು, ಚಾಡಿ ಹೇಳುವದು ಮತ್ತು ಇತರರ ಬಗ್ಗೆ ಕೆಟ್ಟದಾಗಿ ಮಾತನಾಡುವ ಪಾಪಗಳನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವದಿಲ್ಲ, ಆದರೆ ಇವುಗಳು ದೇವರೊಂದಿಗೆ ನಮಗಿರುವ ಸಂಬಂಧದ ಮೇಲೆ ಪರಿಣಾಮ ಬೀರುತ್ತವೆ. ಈ ಪಾಪಗಳು ದೇವರೊಂದಿಗಿನ

ನಮ್ಮ ಪಾಲುಗಾರಿಕೆ ಮತ್ತು ಆತನಿಗೆ ನಾವು ಮಾಡುವ ಆರಾಧನೆ ಹಾಗೂ ಆತನ ಪ್ರಸನ್ನತೆಯಾಗುವ ಅನುಭವಕ್ಕೆ ಅಡ್ಡಿಯನ್ನುಂಟು ಮಾಡುತ್ತವೆ.

ಹರಟೆ ಅಂದರೆ ಏನು?

"ಹರಟೆ" ಅಂದರೆ ನಿಘಂಟಿನ ವ್ಯಾಖ್ಯಾನದ ಪ್ರಕಾರ "ಇತರೆ ಜನರ ವಿಷಯವಾದ ಅನಿಶ್ಚಿತ ಅಥವಾ ಅಂತೆಕಂತೆ ಮಾತು ಅಥವಾ ವರದಿಗಳಾಗಿದ್ದು, ಸಾಂಕೇತಿಕವಾಗಿ ಸತ್ಯವಂದು ದೃಢವಾಗಿರದ ಮಾಹಿತಿಗಳನ್ನು ಒಳಗೊಂಡಿರುತ್ತದೆ" (ಆಕ್ಸಫರ್ಡ್ ಅಡ್ವಾನ್ಸ್‌ಡ್ ಲರ್ನರ್ಸ್ ಡಿಕ್ಷನರಿ). ಹರಟೆ ಸಾಂಕೇತಿಕವಾಗಿ ಅಪ್ರಯೋಜಕವಾದ ಮಾತು ಅಥವಾ ವದಂತಿಯಾಗಿದ್ದು, ಮುಖ್ಯವಾಗಿ ಇತರರ ವೈಯಕ್ತಿಕ ಅಥವಾ ಖಾಸಗಿ ವಿಷಯಗಳ ಕುರಿತಾಗಿರುತ್ತದೆ. ಇದು ಜನರ ಕುರಿತು ತಪ್ಪಾದ ಮಾಹಿತಿಯನ್ನು ಹಬ್ಬಿಸುವದಾಗಿದೆ.

ಈ ಪುಸ್ತಕದಲ್ಲಿ ನಾವು ಇಲ್ಲಿ ತಿಳಿಸಲಾಗಿರುವ ಪದಗಳನ್ನು ಅದಲು ಬದಲಾಗಿ ಉಪಯೋಗಿಸೋಣ, ಅವು ಯಾವುವೆಂದರೆ—ಹರಟೆ, ಚಾಡಿ, ಅಪನಿಂದೆ, ಬೆನ್ನಿಗೆ ಚೂರಿ ಹಾಕುವದು, ಪಿಸುಗುಟ್ಟುವವನು, ಚಾಡಿಕೋರ ಬೆನ್ನ ಹಿಂದೆ ಮಾತನಾಡುವವನು—ಯಾಕಂದರೆ, ಈ ಪ್ರತಿಯೊಂದರ ಅರ್ಥದಲ್ಲಿಯೂ ಬಹಳಷ್ಟು ವ್ಯತ್ಯಾಸಗಳನ್ನು ನಾವು ನೋಡಬಹುದು. ಎನ್.ಕೆ.ಜೆ. ವಿ ಸತ್ಯವೇದವು "ಚಾಡಿಕೋರ" ಪದವನ್ನು ಹರಟೆಮಾತಾಡುವವನು, ಚಾಡಿ ಹೇಳುವವನು ಅಥವಾ ನಿಂದಿಸುವವನಿಗೆ ಉಪಯೋಗಿಸಿದೆ. ನಮ್ಮ ತಿಳುವಳಿಕೆಯ ನಿಮಿತ್ತ, ನಾವು ಸಂಕ್ಷಿಪ್ತವಾಗಿ ಈ ಪದಗಳನ್ನು ವ್ಯಾಖ್ಯಾನಿಸೋಣ, ಆದರೂ ಇವುಗಳನ್ನು ಅದಲು ಬದಲಾಗಿ ಉಪಯೋಗಿಸೋಣ.

- ***ಚಾಡಿ*** ಅಂದರೆ ನಮ್ಮ ಮಧ್ಯದಲ್ಲಿ ಇಲ್ಲದೆ ಇರುವ ಒಬ್ಬರ ಬಗ್ಗೆ ಆಡುವ ದುರುದ್ದೇಶದ ಮಾತುಗಳಾಗಿವೆ; ಅವರಿಗೆ ತಮ್ಮನ್ನು ಸಮರ್ಥಿಸಿಕೊಳ್ಳುವ ಅವಕಾಶವನ್ನೇ ಕೊಡದೆ ಅವರ ಘನತೆಗೆ ಧಕ್ಕೆಯನ್ನುಂಟು ಮಾಡುವದಾಗಿದೆ. ಇದು ಅವರ ಹಿಂದೆ ಅವರನ್ನು "ಕಡಿಯುವದು", ಎಂಬ ಅರ್ಥವನ್ನೂ ಕೊಡುತ್ತದೆ.
- ***ಬೆನ್ನಿಗೆ ಚೂರಿ ಹಾಕುವದು*** ಯಾರೊಂದಿಗಾದರೂ ಸ್ನೇಹದಲ್ಲಿರುವಂತೆ ನಟಿಸುತ್ತಾ ವಿಶ್ವಾಸಘಾತಕ ರೀತಿಯಲ್ಲಿ ಅವರನ್ನು ಟೀಕಿಸುವ ಕ್ರಿಯೆಯಾಗಿದೆ.

- ***ಅಪನಿಂದೆ*** ಅಂದರೆ ಯಾರ ಕುರಿತಾದರೂ ತಪ್ಪಾದ, ನಕಾರಾತ್ಮಕವಾದ, ಕೇಡುಬುದ್ದಿಯ ಮತ್ತು ಹೆಸರು ಕೆಡಿಸುವಂಥ ಹೇಳಿಕೆ ಅಥವಾ ವರದಿಯನ್ನು ಕೊಡುವದು.
- ***ಚಾಡಿಕೋರ (ಬೆನ್ನ ಹಿಂದೆ ಮಾತನಾಡುವವನು)*** ಅಂದರೆ ಇತರರು ಮಾಡುವ ತಪ್ಪುಗಳನ್ನು ಅಧಿಕಾರಿಗೆ ತಿಳಿಸುವವನು, ಸಮಸ್ಯೆಯನ್ನು ಬಗೆಹರಿಸಬೇಕು ಎಂಬದು ಅವನ ಉದ್ದೇಶವಾಗಿರುವದಿಲ್ಲ ಬದಲಾಗಿ ಅವರನ್ನು ತೊಂದರೆಗೆ ಸಿಕ್ಕಿಸಬೇಕು ಎಂಬದೇ ಆಗಿರುತ್ತದೆ.

ಹಳೆ ಒಡಂಬಡಿಕೆಯಲ್ಲಿ, ತನ್ನ ಜನರ ನಡುವೆಯ ಸಮೂಹ ಜೀವನದ ವಿಷಯವಾಗಿ ಸೂಚನೆಗಳನ್ನು ಕೊಡುವಾಗ, ದೇವರು ಹೇಳಿದ್ದೇನೆಂದರೆ,

ವಿಮೋಚನಕಾಂಡ 23:1
ಆಧಾರವಿಲ್ಲದ ಸುದ್ದಿಯನ್ನು ಹಬ್ಬಿಸಬಾರದು. ದುಷ್ಟರ ಸಹಾಯಕ್ಕಾಗಿ ನ್ಯಾಯವಿರುದ್ಧವಾದ ಸಾಕ್ಷಿಯನ್ನು ನುಡಿಯಬಾರದು.

ಯಾಜಕಕಾಂಡ 19:16
ಪರಿಚಯವುಳ್ಳವರಲ್ಲಿ ಒಬ್ಬರ ಮೇಲೊಬ್ಬರು ಚಾಡಿಹೇಳಬಾರದು. ಮತ್ತೊಬ್ಬನಿಗೆ ಮರಣ ಶಿಕ್ಷೆಯಾಗಲೇಬೇಕೆಂದು ಛಲ ಹಿಡಿಯಬಾರದು. ನಾನು ಯೆಹೋವನು.

ಯಾಜಕಕಾಂಡ 19:16a (ಎನ್ ಎಲ್ ಟಿ ಬೈಬಲ್ ಪ್ರಕಾರ)
ನಿನ್ನ ಜನರ ಮಧ್ಯದಲ್ಲಿ ಚಾಡಿಗಾರನಾಗಿ ತಿರುಗಾಡಬೇಡ.

ದುರಾದೃಷ್ಟವೆಂದರೆ, ಬಹಳಷ್ಟು ಜನರು ಹರಟೆಮಾತುಗಳಲ್ಲಿ ಅಥವಾ ಚಾಡಿ ಹೇಳುವದರಲ್ಲಿ ಸಂತೋಷಿಸುತ್ತಾರೆ ಆದ್ದರಿಂದ, ಅದರಲ್ಲಿ ಪಾಲ್ಗೊಳ್ಳುತ್ತಾರೆ. ಹರಟೆಯ ಮಾತು ಕೆಲವರಿಗೆ "ಬಹುಬೆಲೆಯ ಆಹಾರದಂತಾಗಿದೆ." ಅವರು ಹರಟೆಯಲ್ಲಿ ಭಾಗಿಯಾಗುವದನ್ನು ಮತ್ತು ಇತರರ ಬಗ್ಗೆ ಮಾತನಾಡುವದರಲ್ಲಿ ಸಂತೋಷಿಸುತ್ತಾರೆ. ಹರಟೆಯಲ್ಲಿ ಒಂದು ಅಥವಾ ಎರಡು ತಾಸು ಕಳೆದ ನಂತರ ಅವರಿಗೆ ಹೊಟ್ಟೆ ತುಂಬಿದಂತೆ ಅನ್ನಿಸುತ್ತದೆ. ವದಂತಿಗಳು ಒಬ್ಬ ವ್ಯಕ್ತಿಯ ಹೃದಯದೊಳಕ್ಕೆ ಇಳಿಯುತ್ತವೆ. ಇದು ಕೇವಲ ಸಂತೋಷದ ಮಾತುಗಳಷ್ಟೇ ಇದರಿಂದ ಯಾವುದೇ ಪ್ರಯೋಜನವಿಲ್ಲವೆಂದು ನಾವು ಯೋಚಿಸುತ್ತೇವೆ, ಆದರೆ ಯಾವುದರ ಬಗ್ಗೆ ಹರಟೆ ಹೊಡೆಯಲಾಗುತ್ತದೆಯೋ ಅದು ಜನರನ್ನು ಬಾಧಿಸುತ್ತದೆ.

ಜ್ಞಾನೋಕ್ತಿಗಳು 18:8 (ಜ್ಞಾನೋಕ್ತಿಗಳು 26:22ರಲ್ಲಿಯೂ ಇದನ್ನು ನೋಡಬಹುದು)
ಚಾಡಿಕೋರನ ಮಾತುಗಳು ರುಚಿಯಾದ ತುತ್ತುಗಳು;
ಹೊಟ್ಟೆಯೊಳಕ್ಕೇ ಇಳಿಯುವವು.

ಯಾವುದನ್ನು ಹರಟೆ ಎಂದು ಪರಿಗಣಿಸಲಾಗುವದಿಲ್ಲ?

ನಾವು ಇತರರ ಬಗ್ಗೆ ಹೇಳುವಂಥ, ಅವರ ಬಲ, ಬಲಹೀನತೆಗಳು ಬಗ್ಗೆ ಮಾತನಾಡುವಂಥ ಮತ್ತು ಅವರ ವಿಫಲತೆಗಳನ್ನು ವಿಮರ್ಶಿಸುವಂಥ ಸಮಯಗಳು ಕೆಲವೊಮ್ಮೆ ಬರುತ್ತವೆ. ಆದರೂ, ಇವುಗಳನ್ನು ಒಳ್ಳೆಯ ಉದ್ದೇಶ ಮತ್ತು ಮತ್ಸರವಿಲ್ಲದ ರೀತಿಯಲ್ಲಿ ಮಾಡುವಾಗ ಹರಟೆ ಎಂದು ಪರಿಗಣಿಸಲ್ಪಡುವದಿಲ್ಲ.

ಕೆಲವು ಉದಾಹರಣೆಗಳ ಬಗ್ಗೆ ಆಲೋಚಿಸಿರಿ.

ಅನಿಶ್ಚಿತ ಮಾತು / ಯಾರನ್ನೂ ಹೀನೈಸದಂತೆ ಮಾಹಿತಿಯನ್ನು ಹಂಚಿಕೊಳ್ಳುವದು

ಉದಾಹರಣೆಗೆ, ನೀವು ಯಾರನ್ನೋ ಭೇಟಿಮಾಡಿದ ಸಂದರ್ಭ ಮತ್ತು ಅದು ಸಮಯ ವ್ಯರ್ಥವಾಗದಂತೆ ಉಪಯುಕ್ತವಾಗಿತ್ತೇ ಇಲ್ಲವೇ, ಆ ಭೇಟಿ ಫಲಿತಾಂಶ ಸಕಾರಾತ್ಮಕವಾಗಿತ್ತೇ ಅಥವಾ ನಕಾರಾತ್ಮವಾಗಿತ್ತೇ ಎಂಬದನ್ನು ಹಂಚಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳನ್ನು ಚರ್ಚಿಸಬಹುದು. ಅಂಥ ಪರಿಸ್ಥಿತಿಗಳಲ್ಲಿ, ಯಾರನ್ನೂ ಕೀಳಾಗಿ ಕಾಣುವ ಉದ್ದೇಶವಿಲ್ಲದೆ ನೀವು ನಿಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ತಿಳಿಸುವಿರಿ.

ಯಾವುದೋ ಒಂದು ಅನುಭವವನ್ನು ಹಂಚಿಕೊಳ್ಳುವಾಗ ಅದರಲ್ಲಿ ಇತರರು ಹೇಳಿದ ಅಥವಾ ಮಾಡಿದ ಕಾರ್ಯಗಳೂ ಸೇರಿರಬಹುದು

ಇಲ್ಲಿ ಮತ್ತೊಮ್ಮೆ, ನೀವು ಮಾಹಿತಿಗಳನ್ನು ಹಂಚಿಕೊಳ್ಳಬಹುದು, ಆದರೆ ಭಾಗಿಯಾಗಿರುವ ಜನರಲ್ಲಿ ಯಾರನ್ನೂ ನೋಯಿಸುವ ಉದ್ದೇಶದಿಂದ ನೀವು ಇದನ್ನು ಮಾಡುವದಿಲ್ಲ.

ಯಾವುದೋ ಒಂದು ಅನುಭವದ ವೃತ್ತಿಪರ ನಿರ್ಧಾರ ಅಥವಾ ವೈಯಕ್ತಿಕ ಅಥವಾ ಪರಿಸ್ಥಿತಿಯ ಮೌಲ್ಯಮಾಪನ

ಇದು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಸಹಜವಾಗಿ ಸಂಭವಿಸುತ್ತದೆ, ಉದಾಹರಣೆಗೆ, ಒಬ್ಬ ಅಭ್ಯರ್ಥಿಯ ಸಂದರ್ಶನ ಮಾಡಿದ್ದರ ಬಗ್ಗೆ ನೀವು ವರದಿ ಮಾಡುವಾಗ, ಪ್ರದರ್ಶನ ಅಂದಾಜಿಸುವಿಕೆ ಮಾಡುವಾಗ, ಕಷ್ಟದ ಪರಿಸ್ಥಿತಿಯನ್ನು ಬಗೆಹರಿಸುವ ಮತ್ತು ಇತರೆ ಕಾರ್ಯಗಳನ್ನು ಮಾಡುವಾಗ ಹೀಗಾಗುತ್ತದೆ. ಇಂಥ ಸಂದರ್ಭಗಳಲ್ಲಿ, ನೀವು ಪ್ರಾಮಾಣಿಕವಾಗಿ ಬಲ ಮತ್ತು ಬಲಹೀನತೆಗಳು, ಒಳ್ಳೇದು ಮತ್ತು ಕೆಟ್ಟದ್ದರ ಬಗ್ಗೆ ಚರ್ಚಿಸುತ್ತಾ, ನಿಖರವಾದ ಚಿತ್ರಣವನ್ನು ಕೊಡುತ್ತೀರಿ.

ವಿಷಯವನ್ನು ಬಗೆಹರಿಸಲು ಪ್ರಯತ್ನಿಸುವದು

ಏನಾದರು ಜಗಳ ಅಥವಾ ಯಾವುದಾದರು ಸಮಸ್ಯೆಗಳು ಎದುರಾಗಿರುವಂಥ ಸಂದರ್ಭಗಳಲ್ಲಿ, ಮುಂದಿನ ಕ್ರಮ ತೆಗೆದುಕೊಳ್ಳುವ ಸಮಯದಲ್ಲಿ ಯುಕ್ತವಾದ ನಿರ್ಣಯ ಅಥವಾ ತೀರ್ಮಾನಕ್ಕೆ ಬರಲು ನಡೆದಿರುವ ಮತ್ತು ಪ್ರೇರಿಸಿರುವ ಸರಣಿ ಘಟನೆಗಳನ್ನು ವಿಮರ್ಶಿಸುತ್ತೇವೆ. ಇಲ್ಲಿ ಸತ್ಯವೇದವು ನಾವೇನು ಮಾಡಬೇಕೆಂಬದರ ಸೂಚನೆಯನ್ನು ನಮಗೆ ಕೊಟ್ಟಿದೆ—*"ಇದಲ್ಲದೆ ನಿನ್ನ ಸಹೋದರನು ತಪ್ಪುಮಾಡಿದರೆ ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಿಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು. ಅವನು ಅವರ ಮಾತನ್ನು ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ"* (ಮತ್ತಾಯ 18:15-17).

ನಡೆದಿರುವ ತಪ್ಪು ಅಥವಾ ವಿಫಲವಾಗಿರುವ ನೈತಿಕತೆಯ ಬಗ್ಗೆ ಮಾತನಾಡುವಾಗ

ಅಂಥಪರಿಸ್ಥಿತಿಗಳಲ್ಲಿ,ಭಾಗಿಯಾಗಿರುವಎಲ್ಲರವಿಷಯಗಳನ್ನುನಾವುಗಮನಕ್ಕೆ ತಂದುಕೊಳ್ಳಬೇಕು, ಮಾಡಲಾಗಿರುವ ತಪ್ಪಿನ ಬಗ್ಗೆ ಮಾತನಾಡಬೇಕು ಮತ್ತು ತಿದ್ದುವಿಕೆ ಹಾಗೂ ಪುನಃಸ್ಥಾಪನೆಯ ಕಡೆಗೆ ಕಾರ್ಯಮಾಡಬೇಕು. ಆಗಿರುವ ತಪ್ಪನ್ನು ಮುಚ್ಚಿಹಾಕಲು ನಾವು ಪ್ರಯತ್ನಿಸುವದಿಲ್ಲ, ಆದರೆ ಗಲಾತ್ಯ

6:1ರಲ್ಲಿ ಹೇಳಲಾಗಿರುವ ಪ್ರಕಾರ ಆ ವಿಷಯದ ಬಗ್ಗೆ ಮಾತನಾಡುತ್ತೇವೆ, *"ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೋ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು."* ಯಾಕೋಬ 5:16ರಲ್ಲಿ ಸೂಚಿಸಲಾಗಿರುವ ಪ್ರಕಾರ ಪಾಪ ಮತ್ತು ಮಾಡಲಾಗಿರುವ ತಪ್ಪುಗಳನ್ನು ಒಪ್ಪಿಕೊಳ್ಳಬೇಕು ಹಾಗೂ ಪಶ್ಚಾತ್ತಾಪಪಡಬೇಕು, *"ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ."*

ಜನರು ಅಡ್ಡದಾರಿ ಹಿಡಿಯಬಾರದೆಂದು ತಪ್ಪುಗಳನ್ನು ಬೈಲಿಗೆ ತರುವಾಗ

ಕೆಲವೊಮ್ಮೆ ನಾವು ಕಾಳಜಿಯ ವಿಷಯಗಳ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವ ಮತ್ತು ತಪ್ಪು ಮಾಡಿದವರನ್ನು ಹಾಗೂ ಅವರು ಮಾಡಿರುವ ತಪ್ಪುಗಳನ್ನು ಬೈಲಿಗೆ ತರುವ ಸಮಯಗಳು ಇರುತ್ತವೆ. ನಾವು ಇದನ್ನು ಇತರರಿಗೆ ಎಚ್ಚರಿಕೆಯಾಗಿ ಮತ್ತು ಅವರನ್ನು ಸಂರಕ್ಷಿಸುವ ಉದ್ದೇಶದಿಂದ ಮಾಡುತ್ತೇವೆ ಯಾಕಂದರೆ ಅವರು ಕೇಡು ಹಾಗೂ ಅಪಾಯದಿಂದ ದೂರವಿರಲು ಸಾಧ್ಯವಾಗುತ್ತದೆ. ತಪ್ಪು ಮಾಡಿದವರ ವಿಷಯವಾಗಿ ನಮ್ಮ ಹೃದಯಗಳಲ್ಲಿ ಕರುಣೆ ಮತ್ತು ದಯೆ ತುಂಬಿರುತ್ತವೆಯಾದರೂ, ಬೇರೆಯವರ ಹಿತಕ್ಕಾಗಿ ಅವರು ಮಾಡಿರುವ ತಪ್ಪುಗಳನ್ನು ಬೈಲಿಗೆ ತರುತ್ತೇವೆ. *"ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ"* (ಎಫೆಸ 5:11). *"ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು; ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವದು"* (1 ತಿಮೊಥೆ 5:20).

ಮೇಲೆ ತಿಳಿಸಲಾಗಿರುವ ಎಲ್ಲಾ ಪರಿಸ್ಥಿತಿಗಳಲ್ಲಿ, ಆಧಾರವಾಗಿರುವ ಪ್ರಮೇಯ ಏನೆಂದರೆ *"ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಮಾತನಾಡಬೇಕು"* (ಎಫೆಸ 4:15).

ಪ್ರತಿಬಿಂಬ



1) ಒಂದುವೇಳೆ ನಾನು ನನ್ನ ಸಂಭಾಷಣೆಗಳನ್ನು ಹತ್ತಿರದಿಂದ ಪರೀಕ್ಷಿಸುವದಾದರೆ, ಎಷ್ಟು ಸಾಮಾನ್ಯವಾಗಿ ಹರಟೆ ಮಾತುಗಳನ್ನಾಡುತ್ತೇವೆ ಮತ್ತು ಇತರರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತೇನೆ?

□ ಆಗಾಗ □ ಸಾಮಾನ್ಯವಾಗಿ □ ಕೆಲವೊಮ್ಮೆ □ ಅಪರೂಪವಾಗಿ

2) ಜನರು ಇತರರ ಬಗ್ಗೆ ಹರಟೆ ಮಾತುಗಳನ್ನಾಡುವಾಗ ಅವುಗಳನ್ನು ನಿಲ್ಲಿಸದೆ ಅಥವಾ ಅವುಗಳನ್ನು ಕೇಳಿಸಿಕೊಳ್ಳದೆ ಹೊರಟು ಹೋಗದೆ ಎಷ್ಟು ಸಲ ನಾನು ಹರಟೆ ಮಾತುಗಳನ್ನು ಕೇಳಿಸಿಕೊಳ್ಳುವದರಲ್ಲಿ ಸಂತೋಷಿಸುತ್ತೇನೆ?

□ ಆಗಾಗ □ ಸಾಮಾನ್ಯವಾಗಿ □ ಕೆಲವೊಮ್ಮೆ □ ಅಪರೂಪವಾಗಿ

2
ಹರಟೆಗೆ ಅವಕಾಶ ದೊರೆಯುವ ಹುದುವಾದ ಪರಿಸ್ಥಿತಿಗಳು

ನಮಗೆ ಹರಟೆ ಮಾತುಗಳು ಎದುರಾಗುವ ಕೆಲವು ಹುದುವಾದ ಪರಿಸ್ಥಿತಿಗಳ ಬಗ್ಗೆ ಆಲೋಚಿಸೋಣ.

ಸಮುದಾಯದ ಹರಟೆ

ಸಹಜವಾಗಿ, ವಿವಿಧ ಕಾರಣಗಳ ನಿಮಿತ್ತ ಬೆರೆತುಹೋಗಿರುವ ಸಮೂಹಗಳ ನಡುವೆ, ಜನರು ಒಬ್ಬರ ಬಗ್ಗೆ ಒಬ್ಬರು ಮಾತನಾಡುವದರಿಂದ "ಸುದ್ದಿಯು" ಬಹಳ ಬೇಗ ಹರಡುತ್ತದೆ. ನಮ್ಮಲ್ಲಿ ವಾಸ್ತವ್ಯ ಹೂಡಿರುವ ಸಮೂಹಗಳಿವೆ, ಸಾಮಾಜಿಕ ಸಮೂಹಗಳಿವೆ ಮತ್ತು ಇನ್ನೂ ಅನೇಕ ಸಮೂಹಗಳಿವೆ. ಸ್ಥಳೀಯ ಸಭೆಯು ಸಹ ಸಮೂಹವಾಗಿದ್ದು ಬಹಳಷ್ಟು ಜನರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆ ಮತ್ತು ಅನ್ಯೋನ್ಯತೆಯುಳ್ಳವರಾಗಿರುವದರಿಂದ ಬೆರೆತು ಹೋಗಿದ್ದಾರೆ.

ಯಾವುದೇ ಸಮೂಹದಲ್ಲಾದರೂ, ಪರಸ್ಪರ ಒಬ್ಬರಿಗೊಬ್ಬರು ಮಾಹಿತಿಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಹಂಚಿಕೊಳ್ಳಬೇಕಾಗುತ್ತದೆ. ಇದು ಪ್ರಾಮುಖ್ಯವಾಗಿದೆ ಮತ್ತು ಇದಕ್ಕೆ ಅದರದೇ ಆದ ಪ್ರಯೋಜನಗಳಿವೆ.

ಉದಾಹರಣೆಗೆ, ಸ್ಥಳೀಯ ಸಭಾ ಸಮೂಹದ ಬಗ್ಗೆ, ಸತ್ಯವೇದವು ನಮಗೆ ಹೇಳುವದೇನೆಂದರೆ,

ರೋಮನರಿಗೆ 12:15
ಸಂತೋಷಪಡುವವರ ಸಂಗಡ ಸಂತೋಷಪಡಿರಿ, ಅಳುವವರ ಸಂಗಡ ಅಳಿರಿ.

1 ಕೊರಿಂಥಿಯರಿಗೆ 12:26
ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ.

ಒಂದುವೇಳೆ ಇದು ಸಾಧ್ಯವಾಗಬೇಕಾದರೆ, ಪರಸ್ಪರರ ಜೀವಿತಗಳಲ್ಲಿ—ಒಳ್ಳೇದು ಮತ್ತು ಕೆಟ್ಟದ್ದು—ಏನಾಗುತ್ತಿದೆ ಎಂಬದನ್ನು ನಾವು ತಿಳಿದುಕೊಳ್ಳಬೇಕು ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ, ನಾವು ಸಂತೋಷಿಸುತ್ತೇವೆ, ಅಳುತ್ತೇವೆ, ಶ್ರಮೆಪಡುತ್ತೇವೆ, ಒಬ್ಬರನ್ನೊಬ್ಬರು ಗೌರವಿಸುತ್ತೇವೆ ಮತ್ತು ಒಟ್ಟಾಗಿ ಈ ಕಾರ್ಯಗಳಲ್ಲಿ ಪ್ರಯಾಣಿಸುತ್ತೇವೆ. ನಾವು ಜೀವನವನ್ನು ಒಟ್ಟಾಗಿ ಹಂಚಿಕೊಳ್ಳುತ್ತೇವೆ. ಆದರೂ, ಯಾವುದೇ ರೀತಿಯ ಹರಟೆ, ಚಾಡಿ, ಅಪನಿಂದೆ, ಬೆನ್ನ ಹಿಂದೆ ಮಾತನಾಡುವದು ಅಥವಾ ರಹಸ್ಯಗಳನ್ನು ಬಯಲು ಮಾಡುವವರಾಗಿರದೆ, ಅಂಥ ಸುದ್ದಿಗಳನ್ನು ಮರ್ಯಾದೆಯಿಂದ ಹಂಚಿಕೊಳ್ಳುವವರಾಗಿರಬೇಕು.

ಆಸಕ್ತಿಕರವಾದ ಸಂಗತಿ ಏನೆಂದರೆ, ಸ್ಥಳೀಯ ಸಭೆ ಅಥವಾ ವಿಶ್ವಾಸಿಗಳ ಸ್ಥಳೀಯ ಸಮೂಹದ ಸಂಬಂಧವಾಗಿ ಹರಟೆ ಮತ್ತು ಅಯುಕ್ತವಾದ ಮಾತುಗಳ ಬಗ್ಗೆ ಹಲವು ಪತ್ರಿಕೆಗಳಲ್ಲಿ ಹೇಳಲಾಗಿರುವದನ್ನು ನಾವು ನೋಡಬಹುದು.

ಕೊರಿಂಥ ಸಭೆಯವರಿಗೆ ಪತ್ರಿಕೆಯನ್ನು ಬರೆಯುವಾಗ ಪೌಲನು ಅವರಲ್ಲಿದ್ದ ಲೈಂಗಿಕ ಅನೈತಿಕತೆ ಬಗ್ಗೆ ಮಾತನಾಡಿದ್ದಾನೆ ಮತ್ತು ಸಭೆಗೆ ದೇವರ ಕಡೆಗೆ ತಿರುಗಿಕೊಳ್ಳಿರಿ ಎಂಬ ಕರೆಯನ್ನು ಕೊಟ್ಟಿದ್ದಾನೆ, ಇದಲ್ಲದೆ ಅಪೊಸ್ತಲನಾದ ಪೌಲನು ಅವರನ್ನು ಭೇಟಿಮಾಡುವಾಗ, ಜನರು "ಚಾಡಿ ಹೇಳುವದರಲ್ಲಿಯೂ, ಕಿವಿಯೂದುವದರಲ್ಲಿಯೂ" ನಿರತರಾಗಿರುವದನ್ನು ಕಾಣಬಹುದೇನೋ ಎಂದು ಬಹಳವಾಗಿ ಚಿಂತಿಸಿದನು.

2 ಕೊರಿಂಥಿಯರಿಗೆ 12:20

ನಾನು ಬಂದಾಗ ಒಂದುವೇಳೆ ನೀವು ನನ್ನ ಇಷ್ಟದ ಪ್ರಕಾರ ಇರುವದಿಲ್ಲವೇನೋ, ನಾನು ನಿಮ್ಮ ಇಷ್ಟದ ಪ್ರಕಾರ ತೋರುವದಿಲ್ಲವೇನೋ, ಒಂದುವೇಳೆ ನಿಮ್ಮಲ್ಲಿ ಜಗಳ, ಹೊಟ್ಟೆಕಿಚ್ಚು, ದ್ವೇಷ, ಸ್ವಾರ್ಥಬುದ್ಧಿ, ಚಾಡಿಹೇಳುವದು, ಕಿವಿಯೂದುವದು, ಉಬ್ಬಿಕೊಳ್ಳುವದು, ಕಲಹ ಎಬ್ಬಿಸುವದು ಇವುಗಳು ಕಾಣಬರುವದೋ ಏನೋ ಎಂದು ನನಗೆ ಸಂಶಯ ಉಂಟು.

ಎಫೆಸದಲ್ಲಿದ್ದ ಸಭೆಯನ್ನು ನೋಡಿಕೊಳ್ಳುವವನಾಗಿದ್ದ ತಿಮೊಥೆಯನಿಗೆ ಬರೆಯುವಾಗ ಪೌಲನು, ಅಲ್ಲಿದ್ದ ಯೌವನಸ್ಥರಾದ ವಿಧವೆಯರ ಬಗ್ಗೆ ಹೇಳಿದ್ದಾನೆ—ಅದು ಹುದುವಾಗಿ ಎಲ್ಲರಿಗೂ ಅನ್ವಯವಾಗುತ್ತದೆ—ಏನೆಂದರೆ ಅವರು ನಿಷ್ಕ್ರಿಯರಾಗುವಾಗ, ಹರಟೆಯ ಮಾತುಗಳಲ್ಲಿ ಭಾಗವಹಿಸುತ್ತಾ, ಬೇರೆಯವರ ಕೆಲಸಗಳಲ್ಲಿ ಕೈಹಾಕುತ್ತಾ, ಆಡಬಾರದ ಮಾತುಗಳನ್ನಾಡುವವರಾಗುತ್ತಾರೆ.

1 ತಿಮೊಥೆಯನಿಗೆ 5:13
ಇದಲ್ಲದೆ ಅವರು ಮನೆಮನೆಗೆ ತಿರುಗಾಡುತ್ತಾ ಮೈಗಳ್ಳತನವನ್ನು ಕಲಿಯುತ್ತಾರೆ; ಮೈಗಳ್ಳರಾಗುವದಲ್ಲದೆ ಹರಟೆ ಮಾತಾಡುವವರೂ ಇತರರ ಕೆಲಸದಲ್ಲಿ ಕೈಹಾಕುವವರೂ ಆಗಿ ಆಡಬಾರದ ಮಾತುಗಳನ್ನಾಡುತ್ತಾರೆ.

ಇದೇ ಪ್ರಕಾರವಾಗಿ, ಥೆಸಲೊನಿಕದವರಿಗೆ ಬರೆಯುವಾಗ, ಪೌಲನು ಇತರರ ಕೆಲಸಗಳಲ್ಲಿ ತಲೆಹಾಕಿ ಅಕ್ರಮವಾಗಿ ನಡೆಯುವವರನ್ನು ಗದರಿಸಿದ್ದಾನೆ. ಅದರಲ್ಲಿ ಇತರರ ಬಗೆಗಿನ ಹರಟೆ ಮತ್ತು ಅಯುಕ್ತವಾದ ಮಾತುಗಳು ಸಹ ಸೇರಿರುತ್ತವೆ. ಪೌಲನು ಅಂಥವರಿಗೆ ಅವರ ಕೆಲಸವನ್ನು ನೋಡಿಕೊಳ್ಳಬೇಕೆಂದು ಆಜ್ಞಾಪಿಸಿದ್ದಾನೆ.

2 ಥೆಸಲೋನಿಯರಿಗೆ 3:11,12
[11]ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ.
[12]ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ.

ಸ್ಥಳೀಯ ಸಭಾ ಸಮೂಹಗಳಲ್ಲಿ, ಹರಟೆಗಳು ಬಹುಶಃ ಆತ್ಮೀಕ ರೀತಿಯಲ್ಲಿಯೇ ನಡೆಯುತ್ತವೆ. ಸಭೆಯ ಸದಸ್ಯರು ಮತ್ತು ಸಭೆಯ ನಾಯಕರು (ಅಂದರೆ., ಸಭಾಪಾಲಕರು, ಇತ್ಯಾದಿ) ಇಬ್ಬರೂ ಹರಟೆಗಳಲ್ಲಿ ಮತ್ತು ವದಂತಿಗಳನ್ನು ಹಬ್ಬಿಸುವದರಲ್ಲಿ ಭಾಗಿಯಾಗುತ್ತಾರೆ.

ಸ್ಥಳೀಯ ಸಭಾ ಸಮೂಹಗಳ ನಡುವೆ ಹರಟೆಯ ಮಾತುಗಳು ಹರಡುವಂಥ ಸಹಜವಾದ ಕೆಲವು ಮಾರ್ಗಗಳನ್ನು ನೋಡಿಕೊಳ್ಳೋಣ.

ಪ್ರಾರ್ಥನಾ ಮನವಿಗಳು

ಸಂಭಾಷಣೆಯು ಸಹಜವಾಗಿ ಅತ್ಯಂತ ಆತ್ಮೀಕವಾಗಿರುವ ಇಂಥ ಹೇಳಿಕೆಯ ಮೂಲಕ ಪ್ರಾರಂಭವಾಗುತ್ತದೆ—"ಓಹ್, ನಾವು ನಿಜವಾಗಿಯೂ ಇಂತಿಂಥವರಿಗಾಗಿ ಪ್ರಾರ್ಥನೆ ಮಾಡಬೇಕು." ನಂತರದ ಮಾತುಕತೆ ಆ ವ್ಯಕ್ತಿಯ ಕುರಿತಾದ ಎಲ್ಲಾ ಕೆಟ್ಟದಾಗಿರುವ ಮತ್ತು ಹರಟೆಯ ಮಾತುಗಳಾಗಿರುತ್ತವೆ, ಹಾಗೂ "ದಯವಿಟ್ಟು ಇದನ್ನು ಪ್ರಾರ್ಥನೆಯಲ್ಲಿ ನೆನಪಿಸಿಕೊಳ್ಳಿರಿ" ಎಂಬದಾಗಿ ಕೊನೆಗೊಳ್ಳುತ್ತದೆ. ನಿಜವಾಗಿಯೂ ಹರಟೆಯಾಗಿರುವದನ್ನು ಮರೆಮಾಡಲು ನಾವು ಈ ಪ್ರಾರ್ಥನಾ ಮನವಿಯ ಹೊರನೋಟವನ್ನು ಉಪಯೋಗಿಸುತ್ತೇವೆ.

ಇದು ನಿಲ್ಲಬೇಕು. ಇದರಿಂದ ದೂರ ಇರುವ ಆಯ್ಕೆಯನ್ನು ಮಾಡಿಕೊಳ್ಳೋಣ.

ಸಭಾಪಾಲನಾ ಸಲಹೆ ಮತ್ತು ಮಾರ್ಗದರ್ಶನ

ಆತ್ಮೀಕ ಸಹಾಯಕ್ಕಾಗಿ, ಸಭಾಪಾಲಕರು ಮತ್ತು ಆತ್ಮೀಕ ನಾಯಕರಾಗಿರುವ, ನಮ್ಮ ಬಳಿಗೆ ಜನರು ಬರುತ್ತಾರೆ. ಹೀಗೆ ಬರುವಾಗ, ಅತ್ಯಂತ ಸಾಮಾನ್ಯವಾಗಿ ಅವರು ತಮ್ಮ ವೈಯಕ್ತಿಕ ಕಷ್ಟಗಳನ್ನು, ವಿಫಲತೆಗಳನ್ನು ಮತ್ತು ಇತರರೊಂದಿಗೆ ಮಾಡದಿರುವ ಅನೇಕ ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಅವರು ಇವುಗಳನ್ನು ಆತ್ಮವಿಶ್ವಾಸ ಮತ್ತು ಒಳ್ಳೆಯ ಭರವಸೆಯಿಂದ ಹಂಚಿಕೊಳ್ಳುತ್ತಾರೆ. ಆದರೆ, ಬಹುತೇಕ ಸಭಾಪಾಲಕರು ಮತ್ತು ಆತ್ಮೀಕ ನಾಯಕರು ಅನಿಶ್ಚಿತವಾದ ಸಂಭಾಷಣೆಗಳ ಸಮಯದಲ್ಲಿ ಬೇರೆಯವರ ವೈಯಕ್ತಿಕ ಮಾಹಿತಿಯನ್ನು ಇತರರೊಂದಿಗೆ ಹಂಚಿಕೊಳ್ಳುವ ಮೂಲಕ ಭರವಸೆಯನ್ನು ಮುರಿದು ಅಪರಾಧಕ್ಕೆ ಒಳಗಾಗುತ್ತಾರೆ. ಆತ್ಮೀಕ ನಾಯಕನೇ ಮಾಡಿದರೂ ಇದು ಹರಟೆಯ ಮಾತಾಗಿದೆಯೇ ಹೊರತು ಮತ್ತೆನೂ ಅಲ್ಲ! ಇದು ನಿಲ್ಲಬೇಕು! ಆತ್ಮವಿಶ್ವಾಸದಿಂದ ಏನನ್ನು ಹೇಳಿಕೊಳ್ಳಲಾಗಿದೆಯೋ ಅದು ಆತ್ಮವಿಶ್ವಾಸದೊಳಗೇ ಇರಬೇಕು.

ಕೋಟ್ ಟೈಲ್ ಜೊತೆಗಾರಿಕೆ

ಕೆಲವೊಮ್ಮೆ, ಜನರು ಹೆಚ್ಚು ಸಾಧನೆ ಮಾಡಿರುವ ವ್ಯಕ್ತಿಗಳ ಬಾಲದಂತೆ ಅವರ ಹಿಂದೆ ಹೋಗಲು ಇಷ್ಟಪಡುತ್ತಾರೆ, ಉದಾಹರಣೆಗೆ, ಹಿರಿಯ ಸಭಾಪಾಲಕ ಅಥವಾ ನಾಯಕ, ಅಂದರೆ ಅವರೊಂದಿಗೆ ಬಹಳ ನಿಕಟವಾಗಿದ್ದೇವೆ ಎಂದು ಇತರರಿಗೆ ತೋರಿಸಲು ಪ್ರಯತ್ನಿಸುತ್ತಾರೆ. ಯಾವ ವ್ಯಕ್ತಿಯ ಬಾಲವಾಗಿ ಗುರುತಿಸಿಕೊಳ್ಳಲು ಅವರು ಬಯಸುತ್ತಾರೋ ಆ ವ್ಯಕ್ತಿಯ ಕೆಲವು ವೈಯಕ್ತಿಕ ಮತ್ತು ಖಾಸಗಿ ಮಾಹಿತಿಯನ್ನು ಬಡಬಡಿಸುವ ಮೂಲಕ ಹೀಗೆ ಮಾಡುತ್ತಾರೆ. ಖಂಡಿತವಾಗಿಯೂ, ಇತರರು ಅದನ್ನು ಮೆಚ್ಚಿಕೊಳ್ಳುತ್ತಾರೆ ಮತ್ತು ಈ ವ್ಯಕ್ತಿಗೆ ಇಷ್ಟೊಂದು ಮಾಹಿತಿಗಳು ಗೊತ್ತಿವೆ ಎಂದರೆ ಇವನು ನಿಜವಾಗಿಯೂ ಹಿರಿಯ ಸಭಾಪಾಲಕನಿಗೆ ಅಥವಾ ನಾಯಕನಿಗೆ ಬಹಳ ಹತ್ತಿರವಾಗಿರಬೇಕೆಂದು ಯೋಚಿಸುತ್ತಾರೆ. ಇದು ಹರಟೆಯಲ್ಲದೆ ಮತ್ತೇನೂ ಅಲ್ಲ. ಒಂದುವೇಳೆ ನೀವು ನಿಜವಾಗಿಯೂ ಸತ್ಯವಂತನಾದ ಸ್ನೇಹಿತನಾಗಿದ್ದರೆ ಮತ್ತು ನಿಮ್ಮ ಹಿರಿಯ ಸಭಾಪಾಲಕ ಅಥವಾ ನಾಯಕನೊಂದಿಗೆ ನಿಜವಾಗಿಯೂ ನಿಕಟವಾಗಿರುವದಾದರೆ, ಆತನ ಬಾಲವಾಗಿರಲು ಎಂದಿಗೂ ಇಷ್ಟಪಡುವದಿಲ್ಲ.

ಆತನ ಗೌರವವನ್ನು ನಿಮಗಾಗಿ ಸಾಲ ಪಡೆಯಲು ನೀವು ಬಯಸುವದಿಲ್ಲ. ವೈಯಕ್ತಿಕ ವಿಷಯಗಳನ್ನು ಸಾರ್ವಜನಿಕವಾಗಿ ಹೇಳುವ ಮೊದಲು ನೀವು ಬಹಳ ಎಚ್ಚರವಾಗಿರುವಿರಿ.

ಸಮಸ್ಯೆಗಳನ್ನು ಬಗೆಹರಿಸದೆ ತಪ್ಪುಗಳನ್ನು ತೋರಿಸುವದು

ಜನರು ತಪ್ಪುಗಳನ್ನು ಮಾಡುತ್ತಾರೆ. ಹಾಗೆಯೇ, ಸಮೂಹದಲ್ಲಿಯೂ, ಯಾರೋ ಎಲ್ಲೋ ಏನೋ ತಪ್ಪು ಮಾಡಿದಾಗ—ಏನೋ ಅಪರಾಧ ಮಾಡಿರಬಹುದು ಅಥವಾ ಯಾವುದಾದರು ವಿಷಯವನ್ನು ಸರಿಯಾಗಿ ನಿಭಾಯಿಸದೆ ಇರಬಹುದು ಆಗ—ಜಗಳಗಳು ಉಂಟಾಗುತ್ತವೆ. ಅಂಥ ಸಮಯದಲ್ಲಿ ಸಹಜವಾಗಿ ಏನಾಗುತ್ತದೆ ಎಂದರೆ ತೊಂದರೆಗೆ ಒಳಗಾಗಿರುವ ಕಡೆಯವರು ತಮಗಾಗಿರುವ ಅನ್ಯಾಯವನ್ನು ಜನರೆಲ್ಲರಿಗೆ ಹೇಳುತ್ತಾ ಹೋಗುತ್ತಾರೆ, ಅದು ಪರೋಕ್ಷವಾಗಿ "ಹೆಸರು ಕೆಡಿಸುವ ಪ್ರಚಾರವಾಗಿ," ತಪ್ಪು ಮಾಡಿದ ವ್ಯಕ್ತಿಗೆ ಅಪಖ್ಯಾತಿಯನ್ನು ಬರಮಾಡುತ್ತದೆ. ಮಾಹಿತಿಯನ್ನು ಕೊಡುವದರಲ್ಲಿ ಬಹಳಷ್ಟು ಜನರು ಭಾಗಿಯಾಗುವದರಿಂದ ಅದು ಹರಟೆಯ ಮಾತಾಗುತ್ತದೆ. ಇವೆಲ್ಲವೂ ಸಮಸ್ಯೆಯನ್ನು ಗುರುತಿಸುವ ಅಥವಾ ಪರಿಹರಿಸುವ ಬದಲು ವಿಭಜನೆಗಳು ಹಾಗೂ ಜಗಳಗಳನ್ನು ಉಂಟುಮಾಡುತ್ತವೆ. ಮತ್ತೊಂದು ಕಡೆಯಲ್ಲಿ, ಅಂಥ ಪರಿಸ್ಥಿತಿಗಳಲ್ಲಿ ಏನು ಮಾಡಬೇಕೆಂದು ಸತ್ಯವೇದವು ನಮಗೆ ತಿಳಿಸುತ್ತದೆ.

ಮತ್ತಾಯ 18:15-17

15ಇದಲ್ಲದೆ ನಿನ್ನ ಸಹೋದರನು ತಪ್ಪುಮಾಡಿದರೆ ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ.

16ಅವನು ಕೇಳದಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಿಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು.

17ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು; ಆದರೆ ಸಭೆಯ ಮಾತನ್ನೂ ಕೇಳದೆಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ.

ಸಮಸ್ಯೆಯನ್ನು ಬಗೆಹರಿಸದೆ ಜನರ ತಪ್ಪುಗಳನ್ನು ಸಾರ್ವಜನಿಕವಾಗಿ ತೋರಿಸುವ ಬದಲು, ನಾವು ಸತ್ಯವೇದದ ಪ್ರಕಾರ ನಡೆದುಕೊಳ್ಳಬೇಕು ಮತ್ತು ಕ್ಷಮಾಪಣೆ, ತಿದ್ದುವಿಕೆ ಹಾಗೂ ಸ್ವಸ್ಥತೆಯನ್ನು ಉಂಟುಮಾಡುವದರ ಕಡೆಗೆ ಕಾರ್ಯಮಾಡಬೇಕು.

ಸ್ಥಳೀಯ ಸಭೆಯ ಸಮೂಹದ ದೃಷ್ಟಿಯಲ್ಲಿ ಹೇಳಲಾಗಿರುವ ಬಹುತೇಕ ವಿಷಯಗಳು ಇತರೆ ಸಮೂಹಗಳಿಗೂ ಅನ್ವಯವಾಗುತ್ತವೆ.

ಹರಟೆಯ ಮಾತುಗಳಲ್ಲಿ ಭಾಗಿಯಾಗುವ ಸಮೂಹವು ಕ್ರಮೇಣವಾಗಿ ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತದೆ.

ಗಲಾತ್ಯರಿಗೆ 5:15
ಆದರೆ ನೀವು ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗುವವರಾದರೆ ಒಬ್ಬರಿಂದೊಬ್ಬರು ನಾಶವಾದೀರಿ, ನೋಡಿರಿ!

ಕೆಲಸದ ಸ್ಥಳದಲ್ಲಿನ ಹರಟೆ

ನಮ್ಮಲ್ಲಿ ಬಹುತೇಕರು ನಮ್ಮ ಜೀವನದ ಬಹುಪಾಲು ಸಮಯವನ್ನು ಕೆಲಸದ ಸ್ಥಳದಲ್ಲಿ ಕಳೆಯುತ್ತೇವೆ. ವಾರದಲ್ಲಿ ಐದರಿಂದ ಆರು ದಿನ ನಾವು ಕೆಲಸದಲ್ಲಿರುತ್ತೇವೆ, ಪ್ರತಿವಾರ ನಮ್ಮ ಸಮಯದಲ್ಲಿ ಕಾಲುಭಾಗ ನಾವು ಕೆಲಸ ಮಾಡುವ ಸ್ಥಳದಲ್ಲಿಯೇ ಕಳೆಯುತ್ತೇವೆ. ದುರಾದೃಷ್ಟ ಎಂದರೆ, ಕೆಲಸದಲ್ಲಿರುವ ಬಹಳಷ್ಟು ಜನರು ಹರಟೆ, ಚಾಡಿ, ಅಪನಿಂದೆ, ಬೆನ್ನ ಹಿಂದೆ ಮಾತನಾಡುವದು ಅಥವಾ ಅಯುಕ್ತವಾದ ಮಾತುಗಳಲ್ಲಿ ಭಾಗಿಯಾಗುತ್ತಾರೆ. ಅವರು ಇವುಗಳನ್ನು ತಮ್ಮ ಬಾಸ್, ಜೊತೆಕೆಲಸದವರು ಅಥವಾ ತಮ್ಮೊಂದಿಗೆ ಕೆಲಸ ಮಾಡುವ ಇತರರ ವಿಷಯದಲ್ಲಿ ಮಾಡುತ್ತಾರೆ. ಅವರು ಹರಟೆಯಲ್ಲಿ ಭಾಗಿಯಾಗುತ್ತಾ, ಅವರ ಘನತೆಯನ್ನು ಹಾಳುಮಾಡಲು ಯಾರೋ ಮಾಡಿರುವ ಯಾವುದೋ ಕಾರ್ಯವನ್ನು ತಮ್ಮ ಜೊತೆಕೆಲಸಗಾರರಿಗೆ ಹೇಳುತ್ತಾರೆ.

ಕೆಲಸದ ಸ್ಥಳದಲ್ಲಿನ ಹರಟೆಯ ನಿಮಿತ್ತ ಅನಾರೋಗ್ಯಕರವಾದ ವಾತಾವರಣ ಕೆಲಸದ ಸ್ಥಳದಲ್ಲಿ ನಿರ್ಮಾಣವಾಗುತ್ತದೆ. ಇದು ಭಾವನಾತ್ಮಕವಾಗಿಯೂ ಜನರ ಮೇಲೆ ಪರಿಣಾಮವನ್ನು ಬೀರುತ್ತದೆ ಮತ್ತು, ವ್ಯಕ್ತಿಗತ ಅಥವಾ ತಂಡದ ಪ್ರದರ್ಶನವನ್ನು ಕುಂಠಿತಗೊಳಿಸುತ್ತದೆ. ಕ್ರಮೇಣವಾಗಿ, ಕೆಲಸದ ವಾತಾವರಣ ಎಷ್ಟು ಅಸಹ್ಯಕರವಾಗುತ್ತದೆ ಎಂದರೆ ಜನರು, ಸಹಜವಾಗಿ ಒಳ್ಳೆಯವರು, ಕೆಲಸವನ್ನು ಬಿಟ್ಟು ಬೇರೆ ಕಡೆ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಸಂಬಳ ಕಡಿಮೆ ಅಥವಾ ಕೆಲಸ ಆಸಕ್ತಿಕರವಾಗಿಲ್ಲ ಎಂಬ ಕಾರಣಕ್ಕಾಗಿ ಅವರು ಕೆಲಸ ಬಿಡುವದಿಲ್ಲ, ಬದಲಾಗಿ ಕೆಲವರು ಹರಟೆಯ ಮಾತುಗಳಲ್ಲಿ ಮತ್ತು ವದಂತಿಗಳನ್ನು ಹಬ್ಬಿಸುವದರಲ್ಲಿ ಭಾಗಿಯಾಗುವ ಕಾರಣ ಕೆಲಸದ ವಾತಾವರಣವು ಉಪದ್ರವಕರವಾಗಿರುವದರಿಂದ ಬಿಟ್ಟು

ಹೋಗುತ್ತಾರೆ. ತಮ್ಮ ಕೆಲಸದ ಕಡೆಗೆ ಗಮನಹರಿಸಲು ಬಯಸುವಂಥ ಒಳ್ಳೆಯವರು ನಿಜವಾಗಿಯೂ ತಮ್ಮ ಸಮಯ ಮತ್ತು ಶಕ್ತಿಯನ್ನು ಹರಟೆಗಳಲ್ಲಿ ಬಳಸಲು ಹಾಗೂ ವದಂತಿಗಳ ಬೆಂಕಿಯನ್ನು ಆರಿಸುವದರಲ್ಲಿ ಉಪಯೋಗಿಸಲು ಬಯಸುವದಿಲ್ಲ. ಅವರಿಗೆ ಮಾಡಲು ಇನ್ನೂ ಉತ್ತಮವಾದ ಕಾರ್ಯಗಳಿವೆ!

ಸಾಮಾಜಿಕ ಜಾಲತಾಣ ಹರಟೆ

ಹರಟೆಯನ್ನು ಪ್ರಸಾರಮಾಡುವ ಅತ್ಯಂತ ವೇಗವಾದ ಮಾರ್ಗವನ್ನು ಸಾಮಾಜಿಕ ಜಾಲತಾಣವು ಸಹ ಒದಗಿಸಿದೆ. ಕೆಲವೇ ಕ್ಷಣಗಳಲ್ಲಿ, ಒಂದು ಬಟನ್ ಒತ್ತಿದರೆ ಸಾಕು ಹಾನಿಕಾರಕ ಹರಟೆಗಳು ಮತ್ತು ವದಂತಿಗಳು ಆನ್ ಲೈನ್ ನಲ್ಲಿ ಹರಡಿಕೊಳ್ಳುತ್ತದೆ. ಆನ್ ಲೈನ್ ನಲ್ಲಿ ಹಾಕಲಾಗುವ ಒಂದು ಲೇಖನದ ಮೂಲಕ ಒಬ್ಬನ ಘನತೆಯನ್ನು ಪೂರ್ತಿಯಾಗಿ ಹಾಳುಮಾಡಬಹುದಾಗಿದೆ.

ಪ್ರತಿಬಿಂಬ



1) ನೀವು ಸಾಮೂಹದ, ಕೆಲಸದ ಸ್ಥಳದಲ್ಲಿನ ಅಥವಾ ಸಾಮಾಜಿಕ ಜಾಲತಾಣದ ಹರಟೆಗಳಿಗೆ ಬಲಿಪಶುವಾಗಿದ್ದೀರಾ?

   - ಇದರಿಂದ ನಿಮ್ಮ ಮೇಲೆ ಎಂಥಾ ಪರಿಣಾಮ ಉಂಟಾಗಿದೆ?
   - ಅದನ್ನು ನೀವು ಹೇಗೆ ನಿಭಾಯಿಸಿದಿರಿ?
   - ಅದನ್ನು ಮತ್ತೆ ನೆನೆಸಿಕೊಳ್ಳುವಾಗ, ಪರಿಸ್ಥಿತಿಯನ್ನು ಮತ್ತಷ್ಟು ವ್ಯತ್ಯಾಸವಾಗಿ ನಿಭಾಯಿಸಬಹುದಾಗಿತ್ತು ಎಂದು ಅನ್ನಿಸುತ್ತದೆಯೇ?

3
ಹರಟೆಯ ನಕಾರಾತ್ಮಕ ಪರಿಣಾಮಗಳು

ಹರಟೆಯು ಇತರೆ ಹಿಂಸಾತ್ಮಕ ಕ್ರಿಯೆಗಳಂತೆ ಘೋರವಾದ ಅಪರಾಧದಂತೆ ಕಂಡು ಬರದಿದ್ದರೂ, ಹರಟೆಯಿಂದ ನಮ್ಮ ಮೇಲೆ ಮತ್ತು ಇತರರ ಮೇಲಾಗುವ ಗಂಭೀರವಾದ ನಕಾರಾತ್ಮಕ ಪರಿಣಾಮವನ್ನು ನಮ್ಮಲ್ಲಿ ಅನೇಕರು ಗುರುತಿಸುವದಿಲ್ಲ. ಈಗಾಗಲೇ ನಾವು ಹರಟೆಯಿಂದಾಗುವ ನಕಾರಾತ್ಮಕವಾದ ಪರಿಣಾಮಗಳನ್ನು ಈಗಾಗಲೇ ತಿಳಿಸಿದ್ದೇವೆಯಾದರೂ, ಈ ಅಧ್ಯಾಯದಲ್ಲಿ ಇನ್ನೂ ಕೆಲವು ವಿಷಯಗಳನ್ನು ನೋಡಿಕೊಳ್ಳೋಣ.

ಹರಟೆಯು ನಿಷ್ಫಲವಾಗಿದೆ ಮತ್ತು ಸಮಯ ವ್ಯರ್ಥಮಾಡುತ್ತದೆ

ಕೆಲವೊಮ್ಮೆ ಹರಟೆಯ ಮಾತುಗಳಲ್ಲಿ ಭಾಗಿಯಾಗುವ ಜನರೊಂದಿಗೆ ಸಮಯವೂ ಹೊರಟು ಹೋಗುತ್ತದೆ. ಆದ್ದರಿಂದಲೇ ಅದನ್ನು "ಅಪ್ರಯೋಜಕ ಮಾತು" ಎಂದು ಕರೆಯಲಾಗಿದೆ. ಅದು ಸಂಪೂರ್ಣವಾಗಿ ನಿಷ್ಫಲವಾಗಿದೆ. ಅದು ಕೇವಲ ಕಾಲಾಹರಣ ಮಾತ್ರವಲ್ಲ, ಬದಲಾಗಿ ಸಹಜವಾಗಿಯೇ ಹರಟೆಯಲ್ಲಿ ಭಾಗಿಯಾಗುವವರು ಬಹಳಷ್ಟು ಭಾವನಾತ್ಮಕ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ ಹಾಗೂ ಅಂತ್ಯದಲ್ಲಿ ಬಳಲಿಹೋಗುತ್ತಾರೆ.

ಕೆಲವೊಮ್ಮೆ ಜನರು ಕಷ್ಟದ ಪರಿಸ್ಥಿತಿಗಳನ್ನು ಹಾದುಹೋಗುವಾಗ ಯಾರದ್ದೋ ಭಾವನೆಯನ್ನು ಹಂಚಿಕೊಳ್ಳಲು ಅಥವಾ "ಹೊರಹಾಕಲು" ಹರಟೆಯಲ್ಲಿ ಚಿಕಿತ್ಸಾತಂತ್ರವಾಗಿ ಭಾಗಿಯಾಗುತ್ತಾರೆ. ಮನಸ್ಸಿನ ಮಾತುಗಳನ್ನು ಹೇಳುವ ಅಥವಾ ಒಬ್ಬನಿಗೆ ಎದುರಾಗುವ ಸವಾಲುಗಳನ್ನು ಹಂಚಿಕೊಳ್ಳುವ ಪ್ರಾಮುಖ್ಯತೆಯನ್ನು ನಾವು ಒಪ್ಪಿಕೊಳ್ಳುತ್ತೇವಾದರೂ, ಅದನ್ನು ಸರಿಯಾದ ವ್ಯಕ್ತಿಗಳೊಂದಿಗೆ, ಮತ್ತೊಬ್ಬ ವ್ಯಕ್ತಿಯನ್ನು ಕುಗ್ಗಿಸದಂತೆ ಆರೋಗ್ಯಕರವಾದ ರೀತಿಯಲ್ಲಿ ಹೇಳಬೇಕು ಮತ್ತು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ಕಡೆಗೆ ಶ್ರಮಿಸುವವರಾಗಿರಬೇಕು.

ಹರಟೆಯು ಭರವಸೆಯನ್ನು ನಾಶಮಾಡುತ್ತದೆ ಯಾಕಂದರೆ ಒಬ್ಬ ವ್ಯಕ್ತಿಯ ಘನತೆಯು ಹಾಳಾಗುತ್ತದೆ ಮತ್ತು ಅವರ ಚಾರಿತ್ರ್ಯ ವಧೆಯಾಗುತ್ತದೆ

ಯಾವ ವ್ಯಕ್ತಿಯ ಬಗ್ಗೆ ಹರಟೆಯ ಮಾತುಗಳನ್ನು ಹೇಳಲಾಗುತ್ತದೆಯೋ ಅವನಿಗೆ ಅವನ "ಚಾರಿತ್ರ್ಯ ವಧೆಯಾಗುತ್ತಿದ್ದರೂ" ಮತ್ತು ಅವನ ಘನತೆ ಹಾಳಾಗುತ್ತಾ ಇದ್ದರೂ ತನ್ನನ್ನು ಸಮರ್ಥಿಸಿಕೊಳ್ಳುವ ಅವಕಾಶ ಸಿಗುವದಿಲ್ಲ. ಕ್ಷಣಮಾತ್ರದಲ್ಲಿ, ತಪ್ಪಾದ ಮಾಹಿತಿಯನ್ನು ಕೇಳಿಸಿಕೊಳ್ಳುವ ಜನರು ಒಬ್ಬನ ಸ್ವಭಾವದ ಕುರಿತಾಗಿರುವ ಮುಕ್ತಾಯಕ್ಕೆ ಬರುತ್ತಾರೆ, ತಪ್ಪಾದ ರೀತಿಯಲ್ಲಿ ಆತನ ಬಗ್ಗೆ ತೀರ್ಪುಮಾಡುತ್ತಾರೆ ಮತ್ತು ಆ ವ್ಯಕ್ತಿಯ ಮೇಲಿರುವ ಭರವಸೆಯನ್ನು ಕಳೆದುಕೊಳ್ಳುತ್ತಾರೆ. ಹರಟೆಯ ಮೂಲಕ ಒದಗಿಸಲಾದ ತಪ್ಪಾದ ಮಾಹಿತಿಯ ನಿಮಿತ್ತ ಆ ವ್ಯಕ್ತಿ ನಿಜವಾಗಿಯೂ ಯಾರಾಗಿದ್ದಾನೆ ಎಂಬ ಅಯುಕ್ತವಾಗಿರುವ ಚಿತ್ರಣದ ಮುಕ್ತಾಯಕ್ಕೆ ಬರುತ್ತಾರೆ.

ಜ್ಞಾನೋಕ್ತಿಗಳು 11:13
ಚಾಡಿಕೋರನು ಗುಟ್ಟು ರಟ್ಟುಮಾಡುವನು; ನಂಬಿಗಸ್ತನು ಸಂಗತಿಯನ್ನು ಗುಪ್ತಪಡಿಸುವನು.

ನೀವು ನಂಬಿಗಸ್ತನಾದ ಸ್ನೇಹಿತನಾಗಿರುವಾಗ, ನಿಮ್ಮ ಸ್ನೇಹಿತನ ಪರವಹಿಸಲು ಬಯಸುತ್ತೀರಿ ಮತ್ತು ಅವನ ಹೆಸರನ್ನು ಕೆಡಿಸಲು ಅಥವಾ ನಾಶಮಾಡಲು ಅವನ ವಿಫಲತೆಗಳನ್ನು ಪ್ರಕಟಪಡಿಸುವದಿಲ್ಲ.

ಕೆಲವೊಮ್ಮೆ ಯಾರನ್ನಾದರೂ ಮೊದಲನೆಯ ಸಲ ಭೇಟಿಮಾಡುವಾಗ ಆಘಾತವಾಗುತ್ತದೆ, ಮತ್ತು ಅವರು ಈಗಾಗಲೇ ನಿಮ್ಮ ಬಗ್ಗೆ ಕೇಳಿರುವಂತೆ ಅನ್ನಿಸುತ್ತದೆ, ಮತ್ತು ದುರದೃಷ್ಟಕರವೆಂದರೆ, ಅವರು ಕೇಳಿಸಿಕೊಂಡಿರುವ ಎಲ್ಲವುಗಳು ನಕಾರಾತ್ಮಕವಾಗಿರುತ್ತವೆ. ನಿಮಗಿಂತ ಮುಂಚಿತವಾಗಿಯೇ ಹರಟೆಯು ತಲುಪಿರುತ್ತದೆ ಮತ್ತು ನಿಮ್ಮ ಹೆಸರಿಗೆ ಅಗೌರವ ಮತ್ತು ಹಾನಿಯನ್ನುಂಟು ಮಾಡಿರುತ್ತದೆ. ನಂತರ, ನಿಮಗೆ ನಿಮ್ಮನ್ನು ತಿಳಿದುಕೊಳ್ಳಲು ಆತನಿಗೆ ಸಹಾಯ ಮಾಡಲು ಪ್ರಯತ್ನಿಸುವ ಮತ್ತು ನಿಜವಾಗಿಯೂ ನೀವು ಏನು ಎಂಬದನ್ನು ಹೊಸದಾಗಿ ಅರ್ಥಮಾಡಿಸುವ ದೊಡ್ಡ ಕಾರ್ಯ ಎದುರಾಗುತ್ತದೆ. ಕೆಲವೊಮ್ಮೆ ಇದರ ಮೂಲಕ ಕಾರ್ಯಮಾಡುವ ಆಲೋಚನೆಯೇ ಎದೆಗುಂದುವಂತೆ ಮಾಡುತ್ತದೆ.

ಹರಟೆಯು ಭಾವನಾತ್ಮಕವಾಗಿ ಜನರನ್ನು ಬಾಧಿಸುತ್ತದೆ

ಹರಟೆಯೆ ಮೂಲಕ ಕಾಡ್ಗಿಚ್ಚಿನಂತೆ ಹರಡುವ ತಪ್ಪಾದ ಮಾಹಿತಿಯು ಭಾವನೆಗಳ ಮೇಲೆ ಕಾರ್ಯಮಾಡುತ್ತಾ ಆತಂಕ ಮತ್ತು ಜನರು ಎದೆಗುಂದುವಂತೆ ಮಾಡುತ್ತದೆ.

ಜ್ಞಾನೋಕ್ತಿಗಳು 25:18
ನೆರೆಯವನ ಮೇಲೆ ಸುಳ್ಳುಸಾಕ್ಷಿ ಹೇಳುವವನು ಚಮಟಿಕೆ, ಕತ್ತಿ, ಚೂಪಾದ ಬಾಣ ಇವುಗಳೇ.

ಜ್ಞಾನೋಕ್ತಿಗಳು 25:18 (ಎನ್ ಎಲ್ ಟಿ ಬೈಬಲ್ ಪ್ರಕಾರ)
ಇತರರ ಬಗ್ಗೆ ಸುಳ್ಳು ಹೇಳುವದು ಅವರನ್ನು ಕೊಡಲಿಯಿಂದ ಹೊಡೆಯುವದಕ್ಕೆ, ಕತ್ತಿಯಿಂದ ಗಾಯ ಮಾಡುವದಕ್ಕೆ, ಅಥವಾ ಚೂಪಾದ ಬಾಣದಿಂದ ತಿವಿಯುವದಕ್ಕೆ ಸಮಾನವಾಗಿದೆ.

ಉದಾಹರಣೆಗೆ, ಕೆಲಸ ಮಾಡುವ ಸ್ಥಳದಲ್ಲಿ, ಯಾವುದು ಸತ್ಯ ಮತ್ತು ಯಾವುದು ಸತ್ಯವಲ್ಲ ಎಂಬದರ ಕುರಿತು ಸ್ಪಷ್ಟವಾದ ಮಾಹಿತಿಯಿಲ್ಲದೆ ವದಂತಿಗಳು ಹರಡುವಾಗ ಕಾರ್ಮಿಕರು ಎದೆಗುಂದುತ್ತಾರೆ. ಇದು ಅನಾರೋಗ್ಯಕರ ಕೆಲಸದ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಒಳ್ಳೆಯ ಕಾರ್ಮಿಕರು ಬಿಟ್ಟುಹೋಗಲು ಬಯಸುತ್ತಾರೆ.

ಇದೇಪ್ರಕಾರ, ಸಭಾ ಸಮೂಹದಲ್ಲಿ, ಒಂದುವೇಳೆ ವಿಶ್ವಾಸಿಗಳು ಹರಟೆ, ಚಾಡಿ, ಅಪನಿಂದೆ ಮತ್ತು ಬೆನ್ನ ಹಿಂದೆ ಮಾತನಾಡುವದರಲ್ಲಿ ಭಾಗಿಯಾಗುವದಾದರೆ, ಜನರು ಅಂಥ ಸಮೂಹದ ಭಾಗವಾಗಿರಲು ಬಯಸದಂತೆ ಮಾಡುತ್ತದೆ ಮತ್ತು ಅವರು ಸಭೆಗೆ ಬರುವದನ್ನು ನಿಲ್ಲಿಸಲು ಅಥವಾ ಬಿಟ್ಟುಬಿಡಲು ಬಯಸುತ್ತಾರೆ.

ವ್ಯಕ್ತಿಗತವಾಗಿ ಅಥವಾ ಆನ್ ಲೈನ್ ನಲ್ಲಿ ಹರಟೆಯ ಮೂಲಕ ಒಬ್ಬನನ್ನು ನಾಚಿಕೆ ಒಳಪಡಿಸುವದು ಅವನ ವೈಯಕ್ತಿಕ ಘನತೆ ಬಹುತೇಕ ಕೂಡಲೇ ನಾಶವಾಗುವದಕ್ಕೆ ಕಾರಣವಾಗುತ್ತದೆ. ಜನರು ತಮ್ಮ ಖ್ಯಾತಿ ಮತ್ತು ಗೌರವವನ್ನು ಕಳೆದುಕೊಳ್ಳುತ್ತಾರೆ, ಹಾಗೂ ಯಾವುದೇ ಕರುಣೆಯಿಲ್ಲದ ಹರಟೆ ಮತ್ತು ಅಪನಿಂದೆಯ ಕ್ರಿಯೆಗಳ ಮೂಲಕ ವಿಪರೀತವಾದ ಭಾವನಾತ್ಮಕ ಆಘಾತಗಳಿಗೆ ಒಳಗಾಗುತ್ತಾರೆ.

ಪ್ರೌಢ ವಯಸ್ಕರ ಮೇಲೆಯೂ, ಹರಟೆಯಿಂದಾಗುವ ಭಾವನಾತ್ಮಕ

ಪರಿಣಾಮದ ಗಂಭೀರತೆಯ ಬಗ್ಗೆ ಆಲೋಚನೆ ಮಾಡಿರಿ. ಇತ್ತೀಚೆಗಿನ ಸಮಯಗಳಲ್ಲಿ, ಪ್ರೌಢವಯಸ್ಕರು ಸಾಮಾಜಿಕ ಜಾಲತಾಣದ ಮೂಲಕ ಸ್ನೇಹಿತರಿಂದ ಅಥವಾ ಸಹಪಾಠಿಗಳಿಂದ ಆನ್ ಲೈನ್ ನಲ್ಲಿ "ಹಿಂಸೆಗೆ," ಅಪನಿಂದೆಗೆ ಮತ್ತು ಅಪನಿಂದೆಗಳಿಗೆ ಒಳಗಾಗುತ್ತಿರುವ ಕಾರಣ ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ಹೋಗಿದ್ದಾರೆ. ಇದು "ಸೈಬರ್ ಹಿಂಸೆ" ಎಂಬ ಪದ ರಚಿಸುವ ಕಡೆಗೆ ನಡೆಸಿದೆ, ಇದು ಮತ್ತೊಬ್ಬ ವ್ಯಕ್ತಿಗೆ ಕಿರುಕುಳ ಕೊಡಲು, ಬೆದರಿಸಲು, ಮುಜುಗರಗೊಳಿಸಲು ಅಥವಾ ಪೇಚಾಟದಲ್ಲಿ ಸಿಕ್ಕಿಸಲು ತಂತ್ರಜ್ಞಾನ ಬಳಸುವುದಾಗಿದೆ ಮತ್ತು ಇದು ಗಂಭೀರವಾದ ಸಂಗತಿಯಾಗಿದೆ. [ಪ್ರೌಢವಯಸ್ಕರ ತಂದೆತಾಯಿಗಳಿಗೆ ಉಪಯುಕ್ತವಾದ ಸಂಪನ್ಮೂಲವಾಗಿದೆ-**http://cyberbullying.us/**].

ಹರಟೆಯು ಸಂಬಂಧಗಳನ್ನು ನಾಶಮಾಡುತ್ತದೆ

ಹರಟೆ, ಅಪನಿಂದೆ ಮತ್ತು ಇತರರ ಕುರಿತು ಸುಳ್ಳು ಮಾಹಿತಿಯನ್ನು ಹರಡುವದರಿಂದ ಸಹಜವಾಗಿ ಸಂಬಂಧಗಳು ಮುರಿಯಲ್ಪಡುತ್ತವೆ. ಜನರು ತಾವು ಕೇಳಿರುವ ಸತ್ಯವನ್ನು ನಂಬುವಾಗ, ಅವರಿಗೆ ನೋವಾಗುತ್ತದೆ. ಕೋಪ ಮತ್ತು ಬದ್ಧದ್ವೇಷದ ಭಾವನೆಗಳು ಹಾಗೂ ಒಳ್ಳೆಯ ಸಂಬಂಧಗಳು ಹಾಳಾಗುತ್ತವೆ.

ಸತ್ಯವೇದವು ಏನು ಹೇಳುತ್ತದೆ ಎಂಬದನ್ನು ಆಲೋಚಿಸಿರಿ.

ಜ್ಞಾನೋಕ್ತಿಗಳು 16:28
ತುಂಟನು ಜಗಳ ಬಿತ್ತುತ್ತಾನೆ; ಚಾಡಿಕೋರನು ಮಿತ್ರರನ್ನು ಅಗಲಿಸುತ್ತಾನೆ.

ಜ್ಞಾನೋಕ್ತಿಗಳು 25:23 (ಎನ್ ಎಲ್ ಟಿ ಬೈಬಲ್ ಪ್ರಕಾರ)
ಬಡಗಣಗಾಳಿ ಮಳೆ ಬರಮಾಡುವದು; ಚಾಡಿಯ ನಾಲಿಗೆ ಕೋಪದ ಮುಖ ಮಾಡುವದು!

ಜ್ಞಾನೋಕ್ತಿಗಳು 26:20
ಕಟ್ಟಿಗೆಯಿಲ್ಲದಿದ್ದರೆ ಬೆಂಕಿ ಆರುವದು;
ಚಾಡಿಕೋರನು ಇಲ್ಲದಿದ್ದರೆ ಜಗಳ ಶಮನವಾಗುವದು.

ಹರಟೆಯ ಸಣ್ಣ ಬೀಜಗಳು ಅಪನಂಬಿಕೆ ಮತ್ತು ಜಗಳಗಳಾಗಿ ಬಿತ್ತಲ್ಪಡುವದರ ಫಲಿತಾಂಶವಾಗಿ ಉತ್ತಮವಾದ ಸ್ನೇಹಿತರನ್ನು ಬೇರ್ಪಡಿಸುತ್ತದೆ. ಸಂಬಂಧಗಳು ಹಾಳಾಗುತ್ತವೆ. ಹರಟೆಯು ಕೆಟ್ಟ ಭಾವನೆಗಳು ಮತ್ತು ಕೆಟ್ಟ

ಯೋಜನೆಗಳಿಗೆ ಶಕ್ತಿ ತುಂಬಿಸುತ್ತವೆ. ಜನರು ಪಕ್ಷಗಳ ಪರವಹಿಸುವ ಒತ್ತಡಕ್ಕೆ ಒಳಗಾಗುವದರಿಂದ ವಿಭಜನೆಗೊಳಗಾಗುತ್ತಾರೆ. ಇದು ಕೆಲಸ ಮಾಡುವ ಸ್ಥಳದಲ್ಲಿ ಅಥವಾ ಯಾವ ಸಮೂಹದಲ್ಲಾದರೂ ಆಗುತ್ತದೆ. ಸಮಾಧಾನ ಮತ್ತು ಸಾಮರಸ್ಯವನ್ನು ಕಾಪಾಡಲು, ಹರಟೆಯ ಮಾತುಗಳು ನಿಲ್ಲುವದನ್ನು ನಾವು ದೃಢಪಡಿಸಿಕೊಳ್ಳಬೇಕು.

ಪ್ರತಿಬಿಂಬ



1) ನೀವು ಯೋಚಿಸಬಹುದಾದ ಹರಟೆಯ ಇತರೆ ನಕಾರಾತ್ಮಕವಾದ ಪರಿಣಾಮಗಳು ಯಾವುವು?

2) ಹರಟೆಯಿಂದ ಜನರ ಮೇಲೆ ಭಾವನಾತ್ಮಕ ಪರಿಣಾಮ ಉಂಟಾಗಿರುವ ಕೆಲವು ನಿಜ ಜೀವನದ ಪರಿಸ್ಥಿತಿಗಳನ್ನು ನೀವು ಗಮನಿಸಿದ್ದೀರೋ? ಅದರ ಫಲಿತಾಂಶ ಏನು?

3) ಹರಟೆಯಿಂದ ಸಂಬಂಧಗಳು ಹಾಳಾಗಿರುವಂಥ ಯಾವುದಾದರು ನಿಜ ಜೀವನದ ಪರಿಸ್ಥಿತಿಗಳನ್ನು ನೀವು ಗಮನಿಸಿದ್ದೀರೋ? ಅದರ ಫಲಿತಾಂಶ ಏನು? ಜನರು ಸಂಧಾನವಾಗಿದ್ದಾರೆಯೇ ಮತ್ತು ಹರಟೆಯನ್ನು ಕೊನೆಗೊಳಿಸಲು ಶಕ್ತರಾಗಿದ್ದಾರೆಯೇ? ಒಂದುವೇಳೆ ಹಾಗಿದ್ದರೆ, ಅವರು ಯಾವ ರೀತಿ ಅದನ್ನು ಮಾಡಿದ್ದಾರೆ?

4
ಹರಟೆಗೆ ವಿರುದ್ಧವಾಗಿ ದೇವರ ಗಂಭೀರವಾದ ನಿಲುವು

ಹರಟೆ ಹೊಡೆಯುವದು, ಬೆನ್ನ ಹಿಂದೆ ಮಾತನಾಡುವದು, ನಿಂದಿಸುವದು, ಬೆನ್ನಿಗೆ ಚೂರಿ ಹಾಕುವದು ಮತ್ತು ಚಾಡಿ ಹೇಳುವದರ ವಿಷಯವಾಗಿ ಈಗಾಗಲೇ ನಾವು ವಚನಭಾಗಗಳಲ್ಲಿ ನೋಡಿರುವವುಗಳೊಂದಿಗೆ, ದೇವರು ಸತ್ಯವೇದದಲ್ಲಿ ಹರಟೆಯ ವಿಷಯವಾಗಿ ಮಾಡಿರುವ ಗಂಭೀರವಾದ ಗದರಿಕೆಗಳ ಬಗ್ಗೆ ಆಲೋಚಿಸೋಣ.

ದೇವರು ತನ್ನ ಜನರಿಗೆ ಕೊಟ್ಟ ದಶಾಜ್ಞೆಗಳಲ್ಲಿ ಒಂದು ಯಾವುದೆಂದರೆ,

ವಿಮೋಚನಕಾಂಡ 20:16
"ಮತ್ತೊಬ್ಬನ ಮೇಲೆ ಸುಳ್ಳುಸಾಕ್ಷಿ ಹೇಳಬಾರದು."

ಇದರ ಅರ್ಥ ನೀವು ನಿಮ್ಮ ನೆರೆಯವನ ವಿಷಯದಲ್ಲಿ ಸುಳ್ಳುಗಳನ್ನು ಹೇಳಬಾರದು, ತಪ್ಪಾದ ವಿವರಣೆ ಕೊಡಬಾರದು ಅಥವಾ ಸುಳ್ಳು ಮಾಹಿತಿಯನ್ನು ಹಬ್ಬಿಸಬಾರದು.

ನಿಂದಿಸುವ ಕಾರ್ಯದಲ್ಲಿ ಭಾಗಿಯಾಗುವ ತನ್ನ ಜನರನ್ನು ದೇವರು ಗದರಿಸುತ್ತಾನೆ ಮತ್ತು ಬುದ್ದಿ ಹೇಳಲು ಹಾಗೂ ಕಾರ್ಯಗಳನ್ನು ಕ್ರಮಪಡಿಸಲು ತಾನೇ ಮುಂದಾಗುವದಾಗಿ ಎಚ್ಚರಿಕೆಯನ್ನು ಕೊಟ್ಟಿದ್ದಾನೆ.

ಕೀರ್ತನೆಗಳು 50:19-21
[19]ನಿಮ್ಮ ಬಾಯನ್ನು ಕೇಡಿಗೆ ಒಪ್ಪಿಸುತ್ತೀರಿ; ನಾಲಿಗೆಯು ಮೋಸವನ್ನು ನೇಯುತ್ತದೆ;
[20]ಸಹೋದರನನ್ನು ಕ್ಷುದ್ರಮಾಡುತ್ತಾ ಕೂತುಕೊಳ್ಳುತ್ತೀರಿ; ಒಡಹುಟ್ಟಿದವರನ್ನು ದೂರುತ್ತೀರಿ.
[21]ನೀವು ಹೀಗೆ ಮಾಡಿದರೂ ನಾನು ಸುಮ್ಮನೆ ಇದ್ದದರಿಂದ ದೇವರೂ ನಮ್ಮಂಥವನೇ ಎಂದು ನೆನೆಸಿಕೊಂಡಿರಿ.ಈಗಲಾದರೋ ನಾನು ಎಲ್ಲವನ್ನು ನಿಮ್ಮ ಮುಂದೆ ವಿವರಿಸಿ ನಿಮ್ಮನ್ನು ಅಪರಾಧಿಗಳೆಂದು ಸ್ಥಾಪಿಸುವೆನು.

ಸುಳ್ಳು ಸಾಕ್ಷಿಯಾಗಿರುವದು, ಇತರರ ಬಗ್ಗೆ ಸುಳ್ಳುಗಳನ್ನು ಹೇಳುವದು ಮತ್ತು ಒಡಹುಟ್ಟಿದವರ ನಡುವೆ ಭಿನ್ನಾಭಿಪ್ರಾಯಗಳನ್ನು ಬಿತ್ತುವದು ದೇವರು ಹೇಸಿಕೊಳ್ಳುವ ಕಾರ್ಯಗಳಾಗಿವೆ.

ಜ್ಞಾನೋಕ್ತಿಗಳು 6:16-19

[16]ಯೆಹೋವನು ಹಗೆಮಾಡುವ ವಸ್ತುಗಳು ಆರು ಇವೆ. ಹೌದು, ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ.

[17]ಯಾವವಂದರೆ, ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ,

[18]ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡುಮಾಡಲು ತ್ವರೆಪಡುವ ಕಾಲು,

[19]ಅಸತ್ಯವಾಡುವ ಸುಳ್ಳುಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ.

ಈಗಾಗಲೇ ನಾವು ನೋಡಿರುವ ಪ್ರಕಾರ, ಜನರ ನಡುವೆ ನಾವು ಜಗಳ ಅಥವಾ ಭಿನ್ನಾಭಿಪ್ರಾಯಗಳನ್ನು ಬಿತ್ತುವ ಮಾರ್ಗ ಹರಟೆ ಹಾಗೂ ನಿಂದೆಯಾಗಿದೆ. ದೇವರು ಇದನ್ನು ದ್ವೇಷಿಸುವವನಾಗಿದ್ದಾನೆ.

ಚಾಡಿಕೋರರನ್ನು ಮೂರ್ಖ ಎಂದು ಕರೆಯಲಾಗಿದೆ. ಹೀಗಿರುವಾಗ ಹರಟೆಯಲ್ಲಿ, ಭಾಗಿಯಾಗುವದು ಮೂರ್ಖತನದ ಕಾರ್ಯವಾಗಿದೆ.

ಜ್ಞಾನೋಕ್ತಿಗಳು 10:18

ಹೊಟ್ಟೆಯಲ್ಲಿ ಹಗೆಯನ್ನಿಟ್ಟುಕೊಂಡವನು ಸುಳ್ಳುಗಾರ;
ಚಾಡಿಕೋರನು ಜ್ಞಾನಹೀನ.

ರೋಮನರಿಗೆ 1:28-32, ಹರಟೆ ಮಾತುಗಳನ್ನಾಡುವದು ಮತ್ತು ಚಾಡಿಹೇಳುವದನ್ನು ಕೊಲೆ, ಅನೈತಿಕತೆ, ಇತ್ಯಾದಿ. ಪಟ್ಟಿಯಲ್ಲಿ ಸೇರಿಸಿದೆ.

ರೋಮನರಿಗೆ 1:28-32

[28]ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು.

[29]ಹೇಗಂದರೆ ಅವರು ಸಕಲವಿಧವಾದ ಅನ್ಯಾಯ, ದುರ್ಮಾರ್ಗತನ, ಲೋಪುಪ್ತಿ, ದುಷ್ಟತ್ವಗಳಿಂದಲೂ, ಹೊಟ್ಟೇಕಿಚ್ಚು, ಕೊಲೆ, ಜಗಳ, ಮೋಸ, ಹಗೆತನಗಳಿಂದಲೂ ತುಂಬಿದವರಾದರು.

[30]ಅವರು ಕಿವಿ ಊದುವವರೂ, ಚಾಡಿಹೇಳುವವರೂ, ದೇವರನ್ನು ದ್ವೇಷಿಸುವವರೂ, ಸೊಕ್ಕಿನವರೂ, ಅಹಂಕಾರಿಗಳೂ, ಬಡಾಯಿಕೊಚ್ಚುವವರೂ, ಕೇಡನ್ನು ಕಲ್ಪಿಸುವವರೂ

[31]ತಂದೆತಾಯಿಗಳ ಮಾತನ್ನು ಕೇಳದವರೂ, ವಿವೇಕವಿಲ್ಲದವರೂ, ಮಾತಿಗೆ ತಪ್ಪುವವರೂ, ಮಮತೆಯಿಲ್ಲದವರೂ, ಕರುಣೆಯಿಲ್ಲದವರೂ ಆದರು.

[32]ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ.

"ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆ" (ರೋಮನರಿಗೆ 1:32) ಎಂಬ ಎಚ್ಚರಿಕೆಯಲ್ಲಿ ಕಿವಿ ಉದುವವರೂ, ಚಾಡಿ ಹೇಳುವವರೂ ಸೇರಿದ್ದಾರೆ. ಇದು ಹರಟೆಗೆ ವಿರುದ್ಧವಾಗಿರುವ ದೇವರ ಗಂಭೀರವಾದ ನಿಲುವಾಗಿದೆ. ಸರಳವಾಗಿ ಹೇಳುವದಾದರೆ, ಹರಟೆ ಮಾತುಗಳು ಪಾಪವಾಗಿವೆ. ಅದು ದೇವರ ಎದುರು ಅಪರಾಧವಾಗಿದೆ.

ಮೂಲಭೂತವಾಗಿ, ಹರಟೆ, ಕಿವಿ ಉದುವದು, ನಿಂದೆ, ಬೆನ್ನಿಗೆ ಚೂರಿ ಹಾಕುವದು ಮತ್ತು ಚಾಡಿ ಹೇಳುವದು ಇಂಥ ಯಾವುದರಲ್ಲಿಯೂ ನಾವು ಭಾಗಿಯಾಗಬಾರದು.

ಪ್ರತಿಬಿಂಬ

1) ಸತ್ಯವೇದವು ಹರಟೆ, ಕಿವಿ ಉದುವ, ನಿಂದಿಸುವ, ಬೆನ್ನಿಗೆ ಚೂರಿ ಹಾಕುವ ಮತ್ತು ಚಾಡಿ ಹೇಳುವ ಪಾಪದ ವಿಷಯದಲ್ಲಿ ಇಷ್ಟೊಂದು ಸ್ಪಷ್ಟವಾಗಿದ್ದರೂ, ವಿಶ್ವಾಸಿಗಳು ಇನ್ನೂ ಇದರಲ್ಲಿ ತೊಡಗಿರುವದು ಮತ್ತು ಇವುಗಳನ್ನು ಮಾಡುವದರಲ್ಲಿ ಭಾಗಿಯಾಗುತ್ತಿರುವದು ಯಾಕೆ?

5
ನೀವು ಹರಟೆಯನ್ನು ಹೇಗೆ ನಿಭಾಯಿಸುತ್ತೀರಿ?

ನಮ್ಮ ಸುತ್ತಮುತ್ತಲಿನಲ್ಲಿರುವ ಜನರು ಹರಟೆ ಮಾತುಗಳನ್ನಾಡಲು, ನಿಂದಿಸಲು, ಚಾಡಿಹೇಳಲು ಮತ್ತು ವದಂತಿಗಳನ್ನು ಹಬ್ಬಿಸಲು ಪ್ರಾರಂಭಿಸುವ ಪರಿಸ್ಥಿತಿಗಳು ಒಂದುವೇಳೆ ನಮಗೆದುರಾದರೆ ನಾವು ಏನು ಮಾಡಬಹುದು? ಒಂದುವೇಳೆ ನಾವು ಅಂಥ ಕಾರ್ಯಗಳಿಗೆ ಬಲಿಪಶುಗಳಾದರೆ ಏನು ಮಾಡಬೇಕು? ನಾವು ಹೇಗೆ ಪ್ರತಿಕ್ರಿಯಿಸಬೇಕು ಮತ್ತು ಅಪಖ್ಯಾತಿ, ಭಾವನಾತ್ಮಕ ವೇದನೆ ಹಾಗೂ ನಮ್ಮ ಕುರಿತು ಹಬ್ಬಿಸಲಾಗಿರುವ ಸುಳ್ಳು ಸುದ್ದಿಯ ಇತರೆ ಪರಿಣಾಮಗಳನ್ನು ನಿಭಾಯಿಸಬೇಕು?

ಹರಟೆಯನ್ನು ಮೆಟ್ಟಿ ನಿಲ್ಲಬೇಕು

ಪ್ರಾರಂಭದಲ್ಲಿಯೇ, ನಾವು ಪ್ರತಿಯೊಬ್ಬರು ವೈಯಕ್ತಿಕವಾಗಿ ದೃಢವಾದ ಆಯ್ಕೆಯನ್ನು ಮಾಡಿಕೊಳ್ಳಬೇಕು ಮತ್ತು ಯಾವುದೇ ರೀತಿಯ ಹರಟೆಯಲ್ಲಿ ನಾವು ತೊಡಗಿಸಿಕೊಳ್ಳುವದಿಲ್ಲ ಅಥವಾ ಭಾಗವಹಿಸುವದಿಲ್ಲ ಎಂಬ ಕ್ರಮಶಿಕ್ಷಣವನ್ನು ಪಾಲಿಸಬೇಕು. ನಾವು ಅಂಥ ಕೀಳು ಮಟ್ಟದ ಮಾತುಕತೆ ಮತ್ತು ಚಟುವಟಿಕೆಗಳಿಗೆ ಇಳಿಯುವದಿಲ್ಲ. ಜನರು ಹರಟೆ ಮಾಡುವ ಸ್ಥಳಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಒಂದುವೇಳೆ ಅಜಾಗರೂಕತೆಯಿಂದ ಒಳಗಾದರೂ, ನಾವು ಹರಟೆಯಲ್ಲಿ ಭಾಗವಹಿಸುವದಿಲ್ಲ ಮತ್ತು ತೊಡಗಿಸಿಕೊಳ್ಳುವದಿಲ್ಲ.

ಕೀರ್ತನೆಗಳು 34:13

ಹಾಗಾದರೆ ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ; ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ.

ಕೀರ್ತನೆಗಳು 39:1

ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು; ದುಷ್ಟರು ನನ್ನ ಮುಂದೆ ಇರುವಾಗ ಬಾಯಿಗೆ ಕುಕ್ಕೆಹಾಕಿಕೊಂಡಿರುವೆನು ಅಂದುಕೊಂಡೆನು.

ಕೀರ್ತನೆಗಳು 139:4

ಯೆಹೋವನೇ ನನ್ನ ನಾಲಿಗೆಯ ಮಾತುಗಳಲ್ಲಿ ನೀನು ಅರಿಯದೆ ಇರುವಂಥದು ಒಂದೂ ಇಲ್ಲ.

ನಾವು ನಮ್ಮನ್ನು ನಿಯಂತ್ರಿಸಿಕೊಳ್ಳುತ್ತೇವೆ ಮತ್ತು ದೇವರಿಗೆ ವಿರುದ್ಧವಾಗಿ ಪಾಪಮಾಡಲು ನಿರಾಕರಿಸುತ್ತೇವೆ. ನಮ್ಮ ಹರಟೆಯನ್ನು, ಒಂದುವೇಳೆ ನಾವು ಪಿಸುಗುಟ್ಟಿದರೂ ದೇವರಿಂದ ಮರೆಮಾಡಲು ಆಗುವದಿಲ್ಲ ಎಂಬದು ನಮಗೆ ಗೊತ್ತಿದೆ!

ಯಾರ ಮುಂದೆಯಾದರೂ ಏನನ್ನಾದರು ಹೇಳಲು ನಿಮ್ಮಿಂದ ಆಗದಿದ್ದರೆ ಅದನ್ನು ಅವರ ಹಿಂದೆಯೂ ಹೇಳಬೇಡಿರಿ. ಅವರ ಅನುಪಸ್ಥಿತಿಯಲ್ಲಿ ನೀವು ಹೇಗೆ ಹೇಳುತ್ತೀರೋ ಅವರ ಉಪಸ್ಥಿತಿಯಲ್ಲಿಯೂ ಹಾಗೆಯೇ ಹೇಳಬೇಕು.

ಪ್ರತಿಯೊಬ್ಬರ ವಿಷಯದಲ್ಲಿಯೂ ನಿಮ್ಮ ಹೃದಯವನ್ನು ಶುದ್ಧವಾಗಿ ಮತ್ತು ಅಪರಾಧ ಹಾಗೂ ಕೆಟ್ಟ ಭಾವನೆಯಿಲ್ಲದೆ ಸ್ವತಂತ್ರವಾಗಿ ಇರಿಸಿಕೊಳ್ಳಿರಿ. ಯಾವಾಗಲೂ ಪ್ರೀತಿಯಲ್ಲಿ ನಡೆದುಕೊಳ್ಳುವ ಉದ್ದೇಶವುಳ್ಳವರಾಗಿರಿ. ಈ ರೀತಿಯಾಗಿ ನೀವು ಜನರನ್ನು ಕೀಳಾಗಿ ಕಾಣಲು, ಅವರಿಗೆ ಕೇಡು ಮಾಡಲು ಅಥವಾ ಅವರನ್ನು ಹಾಳುಮಾಡಲು ಕೆಟ್ಟದಾಗಿ ಮಾತನಾಡುವದಿಲ್ಲ.

ಮತ್ತಾಯ 15:19

ಹೇಗಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ, ಕೊಲೆ, ಹಾದರ, ಸೂಳೆಗಾರಿಕೆ, ಕಳ್ಳತನ, ಸುಳ್ಳುಸಾಕ್ಷಿ, ಬೈಗಳು ಹೊರಟು ಬರುತ್ತವೆ.

ರೋಮನರಿಗೆ 13:9

ಹೇಗಂದರೆ ವ್ಯಭಿಚಾರ ಮಾಡಬಾರದು, ನರಹತ್ಯಮಾಡಬಾರದು, ಕದಿಯಬಾರದು, ಪರರ ಸೊತ್ತನ್ನು ಆಶಿಸಬಾರದು ಈ ಮೊದಲಾದ ಎಲ್ಲಾ ಕಟ್ಟಳೆಗಳು—ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲಿ ಅಡಕವಾಗಿವೆ.

ಪ್ರತೀಕಾರ ಮಾಡುವದನ್ನು ನಿರಾಕರಿಸಿರಿ. ಹರಟೆಯ ಮಾತುಗಳನ್ನು ಹಬ್ಬಿಸುವ ಮೂಲಕ ನೀವು ಹರಟೆಯ ಸ್ವಭಾವದ ಮೇಲೆ ಜಯಗಳಿಸಲು ಆಗುವದಿಲ್ಲ.

ಒಂದುವೇಳೆ ಸಾಧ್ಯವಾದರೆ, ಪ್ರೀತಿಯಿಂದ ಎದುರಿಸಿರಿ

ಸಾಧ್ಯವಾಗುವದಾದರೆ, ವದಂತಿ ಮತ್ತು ತಪ್ಪು ಮಾಹಿತಿಯನ್ನು ಪ್ರಾರಂಭಿಸಿದ, ಅಥವಾ ಹರಟೆಯ ಮಾತುಗಳಲ್ಲಿ ಭಾಗಿಯಾಗುವ ಜನರೊಂದಿಗೆ ಅದರ ಬಗ್ಗೆ ಮಾತನಾಡಿರಿ. ಹರಟೆಯ ಮಾತುಗಳ ಹರಡುವಿಕೆಯಿಂದ ಆಗಿರುವ ಅನಾಹುತಗಳನ್ನು ತಿಳಿದುಕೊಳ್ಳಲು ಅವರಿಗೆ ಪ್ರೀತಿಯಿಂದ ಸಹಾಯ

ಮಾಡಿರಿ. ಅದನ್ನು ಮೆಟ್ಟಿ ನಿಲ್ಲಲು ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅದರ ಬಗ್ಗೆ ಯಾವುದೇ ಹರಟೆ ಹೊಡೆಯದೆ ನೇರವಾಗಿ ಭಾಗಿಯಾಗಿರುವ ವ್ಯಕ್ತಿಯೊಂದಿಗೆ (ಗಳೊಂದಿಗೆ) ನಿಜವಾದ ಸಮಸ್ಯೆಯ ಕುರಿತು ಮಾತನಾಡಿರಿ.

ಅದು ಹಾಗೆಯೇ ಸತ್ತು ಹೋಗಲಿ

ಹರಟೆಯ ಮಾತುಗಳಿಗೆ ಶಕ್ತಿ ತುಂಬಿಸಬೇಡಿರಿ. ಹರಟೆಯ ಮಾತುಗಳು ಸತ್ತುಹೋಗಲು ಬಿಡಿರಿ. ಅಂಥ ಪರಿಸ್ಥಿತಿಗಳಲ್ಲಿ, ಎಷ್ಟು ಕಡಿಮೆಯಾಗಿ ಮಾತನಾಡುತ್ತೇವೆಯೋ ಅಷ್ಟು ಉತ್ತಮ. ಎಷ್ಟು ಹೆಚ್ಚು ಜನರು ಅದರಲ್ಲಿ ಭಾಗವಹಿಸಲು ನಿರಾಕರಿಸಿದಷ್ಟೂ, ಕಥೆಯು ಕ್ರಮೇಣವಾಗಿ ಸತ್ತು ಹೋಗುತ್ತದೆ.

ಸಾಧ್ಯವಾಗುವದಾದರೆ, ಆ ವ್ಯಕ್ತಿ ಅಥವಾ ಪರಿಸ್ಥಿತಿಯ ಬಗ್ಗೆ ಸಕಾರಾತ್ಮಕವಾದ ಮಾತುಗಳನ್ನು ಹೇಳುವ ಮೂಲಕ ಹರಟೆಗೆ ವಿರುದ್ಧವಾಗಿ ಪ್ರತಿದಾಳಿ ಮಾಡುವ ಆಯ್ಕೆಯನ್ನು ಮಾಡಿಕೊಳ್ಳಿರಿ. ವಿಷಯಗಳಲ್ಲಿನ ಉತ್ತಮ ಭಾಗವನ್ನು ನೋಡಲು ಜನರಿಗೆ ಸಹಾಯ ಮಾಡಿರಿ. ಹರಟೆ ಮತ್ತು ವದಂತಿಗಳು ಅರ್ಧಸತ್ಯಗಳು, ಅಪೂರ್ಣವಾದ ಮಾಹಿತಿ ಅಥವಾ ತಪ್ಪು ಮಾಹಿತಿಯ ಮೇಲೆ ಆಧಾರವಾಗಿರುತ್ತವೆ. ಆದ್ದರಿಂದ, ನಾವು ವಿಷಯಗಳ ಉತ್ತಮ ಭಾಗದ ಮತ್ತೆ ಮಾತನಾಡುವಾಗ, ಹರಡುವಂಥ ಅರ್ಧಸತ್ಯಗಳ ಮೇಲೆ ಪ್ರತಿದಾಳಿ ಮಾಡಲು ಸಾಧ್ಯವಾಗುತ್ತದೆ.

ಪ್ರಾರ್ಥನೆ ಮಾಡಿರಿ, ಕ್ಷಮಿಸಿರಿ ಮತ್ತು ಬಿಡುಗಡೆಗೊಳಿಸಿರಿ

ಒಂದುವೇಳೆ ನೀವು ಅಪನಿಂದೆ ಮತ್ತು ಹರಟೆಯ ಮಾತುಗಳಿಗೆ ಬಲಿಪಶುವಾಗಿದ್ದರೆ, ಪ್ರಾರ್ಥನೆ ಮಾಡಿರಿ. ಕರ್ತನು ನಿಮ್ಮ ಸಂರಕ್ಷಣೆಗೆ ಬರುತ್ತಾನೆ.

ಕೀರ್ತನೆಗಳು 31:13-16

[13]ಅನೇಕರು ನನ್ನ ಪ್ರಾಣ ತೆಗೆಯಬೇಕೆಂದು ಒಳಸಂಚು ಮಾಡುತ್ತಿದ್ದಾರೆ; ಅವರು ಪಿಸುಗುಟ್ಟುವ ಮಾತುಗಳು ನನ್ನ ಕಿವಿಗೆ ಬಿದ್ದವೆ; ಎಲ್ಲಾ ಕಡೆಯಲ್ಲಿಯೂ ನನಗೆ ಭೀತಿಯುಂಟಾಗಿದೆ.
[14]ನಾನಾದರೋ ಯೆಹೋವನೇ, ನಿನ್ನಲ್ಲೇ ಭರವಸವಿಟ್ಟಿದ್ದೇನೆ; ನೀನೇ ನನ್ನ ದೇವರೆಂದು ಹೇಳಿಕೊಂಡಿದ್ದೇನೆ.
[15]ನನ್ನ ಆಯುಷ್ಕಾಲವು ನಿನ್ನ ಕೈಯಲ್ಲಿದೆ; ಹಿಂದಟ್ಟುವ ಶತ್ರುಗಳಿಗೆ ನನ್ನನ್ನು ತಪ್ಪಿಸಿ ಕಾಪಾಡು.
[16]ನಿನ್ನ ಸೇವಕನನ್ನು ಪ್ರಸನ್ನಮುಖದಿಂದ ನೋಡು; ಪ್ರೀತಿಯಿಂದ ನನ್ನನ್ನು ರಕ್ಷಿಸು.

ಜನರು ನಿಮ್ಮ ಬಗ್ಗೆ ಹರಟೆಯ ಮಾತುಗಳನ್ನಾಡುವಾಗ ಮತ್ತು ನಿಮ್ಮ ಬಗ್ಗೆ ವದಂತಿಗಳನ್ನು ಹಬ್ಬಿಸುವಾಗ, ನೋವಾಗುತ್ತದೆ. ಅದು ವೇದನೆಯುಳ್ಳದ್ದಾಗಿರುತ್ತದೆ. ದೇವರಿಗೆ ಪ್ರಾರ್ಥನೆ ಮಾಡುವ ಮೂಲಕ ನಿಮ್ಮ ನೋವು ಮತ್ತು ವೇದನೆಯ ಭಾವನೆಗಳನ್ನು ಬಿಡುಗಡೆ ಮಾಡಿರಿ. ಆ ವಿಷಯದ ಬಗ್ಗೆ ದೇವರೊಂದಿಗೆ ಮಾತನಾಡಿರಿ. ನಿಮ್ಮ ಹೃದಯ ಮತ್ತು ಭಾವನೆಗಳನ್ನು ಆತನ ಮುಂದೆ ಸುರಿಯಿರಿ.

ಇದನ್ನು ಮಾಡುತ್ತಿರುವವರ ವಿಷಯವಾಗಿ ಕ್ಷಮಾಪಣೆಯನ್ನು ಬಿಡುಗಡೆ ಮಾಡಿರಿ. ಅವರ ಕಾರ್ಯದ ಹೊರತಾಗಿಯೂ ಅವರನ್ನು ಪ್ರೀತಿಸಿರಿ. ಅವರು ಮಾಡುತ್ತಿರುವ ಕಾರ್ಯದ ಹಿಂದೆ ಅಲ್ಲಗಳೆಯುವಿಕೆ, ದ್ವೇಷ ಮತ್ತು ಇತರೆ ತಪ್ಪಾದ ಉದ್ದೇಶಗಳು ಇದ್ದಿರಬಹುದು, ಆದರೆ ನೀವು ದೇವರ ಪ್ರೀತಿಯಿಂದ ಅವರನ್ನು ಪ್ರೀತಿ ಮಾಡುವ ಆಯ್ಕೆಯನ್ನು ಮಾಡಿಕೊಳ್ಳಿರಿ. ನೀವು ಅವರನ್ನು ಕ್ಷಮಿಸುವ ಮತ್ತು ಬಿಡುಗಡೆ ಮಾಡುವ ಹಾಗೂ ನಿಮ್ಮ ಪರವಾಗಿ ನಿಲ್ಲಲು ಮತ್ತು ನಿಮ್ಮನ್ನು ಉದ್ಧರಿಸಲು ದೇವರನ್ನು ಎದುರುನೋಡುವ ಆಯ್ಕೆಯನ್ನು ಮಾಡಿಕೊಳ್ಳಿರಿ. *"ಕೇಳುವವರಾದ ನಿಮಗೆ ನಾನು ಹೇಳುವದೇನಂದರೆ— ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ; ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದಮಾಡಿರಿ; ನಿಮ್ಮನ್ನು ಬೈಯ್ಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ"* (ಲೂಕ 6:27,28).

ನಮ್ಮ ಸಮೂಹವನ್ನು ಹರಟೆಯ ಮಾತುಗಳಿಲ್ಲದ-ವಲಯವನ್ನಾಗಿ ಮಾಡೋಣ

ಹರಟೆ, ಕಿವಿಗುದುವದು, ನಿಂದಿಸುವದು, ಬೆನ್ನ ಹಿಂದೆ ಮಾತನಾಡುವದು ಮತ್ತು ಚಾಡಿಹೇಳುವದನ್ನು ಸಹಿಸಿಕೊಳ್ಳದಿರುವ ಸಮೂಹದ ಜನರಾಗಿರೋಣ. ಹರಟೆ, ಕಿವಿಗುದುವದು, ನಿಂದಿಸುವದು, ಬೆನ್ನ ಹಿಂದೆ ಮಾತನಾಡುವದು ಮತ್ತು ಚಾಡಿಹೇಳುವದು—ಇವು ನಮ್ಮ ಮಧ್ಯದಲ್ಲಿ ಎಷ್ಟು ಮಾತ್ರವೂ ಇರುವದಿಲ್ಲ! ಹರಟೆಯು ದೇವರ ಸುಂದರವಾದ ತೋಟವಾಗಿರುವ, ಸಭೆಯನ್ನು ತೊಂದರೆಪಡಿಸುವ ಮತ್ತು ಅಡಗಿಸುವ ಕಳೆಯಾಗಿದೆ. ಆತನ ತೋಟವನ್ನು ಕಳೆರಹಿತವನ್ನಾಗಿಸುವಂಥ ಸಂಸ್ಕೃತಿಯನ್ನು ಸೃಷ್ಟಿಸೋಣ ಮತ್ತು ಸ್ವ-ಶಿಸ್ತನ್ನು ಅಭಿವೃದ್ಧಿ ಪಡಿಸಿಕೊಳ್ಳೋಣ.

ಪ್ರತಿಬಿಂಬ



1) ನೀವು ಹರಟೆ, ನಿಂದೆ ಮತ್ತು ಚಾಡಿಯನ್ನು ಜಯಿಸಬೇಕಾಗಿರುವಂಥ, ನಿರ್ದಿಷ್ಟವಾದ ಪರಿಸ್ಥಿತಿ (ಗಳನ್ನು) ಈಗ ಸದ್ಯಕ್ಕೆ ಎದುರಿಸುತ್ತಾ ಇದ್ದೀರಾ? ನಿಮಗೆದುರಾಗಿರುವ ಪರಿಸ್ಥಿತಿ (ಗಳಲ್ಲಿ) ಜಯಿಸಲು ನಿರ್ದಿಷ್ಟವಾಗಿ ನೀವು ಮಾಡಬಹುದಾದ ಕಾರ್ಯಗಳು ಯಾವುವು?

6
ಪ್ರಾರ್ಥನೆ

ಅರಿಕೆ ಮತ್ತು ಪಶ್ಚಾತ್ತಾಪದ ಪ್ರಾರ್ಥನೆ

ಪರಲೋಕದಲ್ಲಿರುವ ಪ್ರೀತಿಯ ತಂದೆಯೇ, ನನ್ನ ಮಾತುಗಳ ವಿಷಯದಲ್ಲಿ ನಾನು ಎಚ್ಚರಿಕೆಯುಳ್ಳವನಾಗಿ ಇಲ್ಲ ಎಂಬದನ್ನು ಅರಿಕೆಮಾಡಿಕೊಳ್ಳುತ್ತೇನೆ. ನಾನು ತಿಳಿದೇ, ಕೆಲವೊಮ್ಮೆ ತಿಳಿಯದೆಯೇ, ಇತರರ ವಿಷಯವಾಗಿ ಹರಟೆಯ ಮಾತುಗಳನ್ನಾಡಿದ್ದೇನೆ, ಇತರರ ಮೇಲೆ ಅಪನಿಂದೆಗಳನ್ನು ಮಾಡಿದ್ದೇನೆ ಮತ್ತು ಇತರರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದೇನೆ. ವದಂತಿಗಳನ್ನು ಹಬ್ಬಿಸುವ ಮತ್ತು ಜನರ ಘನತೆಯನ್ನು ಹಾಳುಮಾಡುವ ಅಪರಾಧ ನನ್ನ ಮೇಲಿದೆ. ನಾನು ಮಾಡಿರುವ ತಪ್ಪುಗಳಿಗಾಗಿ ಪಶ್ಚಾತ್ತಾಪಪಡುತ್ತೇನೆ ಮತ್ತು ನನ್ನನ್ನು ಕ್ಷಮಿಸುವಂತೆ ಹಾಗೂ ಯೇಸು ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ನನ್ನ ಪಾಪದಿಂದ ನನ್ನನ್ನು ಶುದ್ಧೀಕರಿಸುವಂತೆ ಬೇಡಿಕೊಳ್ಳುತ್ತೇನೆ. ನಾನು ಹರಟೆಯ ಜೀವನಶೈಲಿಯನ್ನು ತೊರೆಯುತ್ತೇನೆ. ಹಾಗೆಯೇ, ನಾನು ಹರಟೆ, ಅಪನಿಂದೆ ಮತ್ತು ಇತರರ ಬಗ್ಗೆ ಕೆಟ್ಟದಾಗಿ ಮಾತನಾಡುವದನ್ನು ಮುಂದುವರೆಸದಂತೆ ದಯವಿಟ್ಟು ನನ್ನ ಮೇಲೆ ಗಮನವಿಡು. ಹೀಗೆ ಮಾಡುವದಕ್ಕಾಗಿ ನಾನು ನಿನಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಯೇಸುವಿನ ನಾಮದಲ್ಲಿ, ಆಮೆನ್.

ಈ ಹಿಂದೆ ಹರಟೆಯ ನಿಮಿತ್ತ ಗಾಯಗೊಂಡಿರುವವರಿಗಾಗಿ ಪ್ರಾರ್ಥನೆ

ಪ್ರೀತಿಯುಳ್ಳ ತಂದೆಯೇ, ನಾನು ನನ್ನ ಹೃದಯವನ್ನು ನಿನ್ನ ಮುಂದೆ ಸುರಿಯುತ್ತೇನೆ ಯಾಕಂದರೆ ನೀನು ನನ್ನನ್ನು ಪ್ರೀತಿಸುವೆ ಮತ್ತು ನನಗಾಗಿ ಚಿಂತಿಸುವೆ ಎಂಬದು ನನಗೆ ಗೊತ್ತಿದೆ. ನನ್ನ ಆಂತರಿಕ ಆಲೋಚನೆಗಳು ಮತ್ತು ಭಾವನೆಗಳು ನಿನಗೆ ಗೊತ್ತಿವೆ. ನನ್ನ ವಿಷಯವಾಗಿ ಇವರು (ಜನರ ಹೆಸರು ಅಥವಾ ಪರಿಸ್ಥಿತಿ) ಹಬ್ಬಿಸಿರುವ ವದಂತಿ, ಅಪನಿಂದೆ ಮತ್ತು ಹರಟೆಯ ಮಾತುಗಳಿಂದ ನನಗೆ ನೋವು ಮತ್ತು ವೇದನೆಯಾಗಿದೆ ಎಂಬದು ನಿನಗೆ ಗೊತ್ತಿದೆ. ನಾನು ನನ್ನ ನೋವು ಮತ್ತು ಭಾವನೆಗಳನ್ನು ನಿನಗೆ ಒಪ್ಪಿಸುತ್ತೇನೆ ಹಾಗೂ ನನ್ನ ನೋವನ್ನು ವಾಸಿಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಓ ಕರ್ತನೇ, ನನ್ನ ಭಾವನೆಗಳನ್ನು ಮತ್ತು ನನ್ನ ಜ್ಞಾಪಕಗಳನ್ನು ವಾಸಿಮಾಡು.

ಪವಿತ್ರಾತ್ಮನ ಬಲದಿಂದ ಮತ್ತು ಪ್ರೀತಿ ಮಾಡಲು ಆತನು ನನಗೆ ಕೊಡುವ ಶಕ್ತಿಯಿಂದ, ನನ್ನನ್ನು ನೋಯಿಸಿರುವವರಿಗೆ ನಾನು ಕ್ಷಮಾಪಣೆಯನ್ನು ಬಿಡುಗಡೆ ಮಾಡುತ್ತೇನೆ. ನನ್ನ ಹೃದಯದೊಳಗೆ ಸುರಿಸಲ್ಪಟ್ಟಿರುವ ದೇವರ ಪ್ರೀತಿಯನ್ನು ನಾನು ಅವರಿಗಾಗಿ ಬಿಡುಗಡೆ ಮಾಡುತ್ತೇನೆ. ನನ್ನ ಪರವಾಗಿ ನೀನು ದೈವೀಕವಾಗಿ ಮಧ್ಯಸ್ಥಿಕೆಯನ್ನು ವಹಿಸಬೇಕೆಂದು ಮತ್ತು ಈ ವದಂತಿಗಳು, ಹರಟೆ ಮತ್ತು ಅಪನಿಂದೆಯಿಂದ ನನ್ನ ಜೀವಿತದಲ್ಲಾಗಿರುವ ಅನಾಹುತಗಳಿಂದ ನನ್ನನ್ನು ಬಿಡುಗಡೆಗೊಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ನಿನ್ನ ದಯೆ ಮತ್ತು ಘತನೆಯಿಂದ ನನ್ನ ಜೀವಿತವನ್ನು ತುಂಬಿಸು. ನಿನ್ನ ಹಸ್ತವು ನನ್ನನ್ನು ಉದ್ಧರಿಸಲಿ. ಓ ಕರ್ತನೇ, ನೀನು, ನನ್ನ ಪ್ರಭಾವ ಮತ್ತು ನನ್ನ ತಲೆಯನ್ನು ಮೇಲೆತ್ತುವವನು ಆಗಿರುವೆ. ಕರ್ತನೇ, ನಾನು ನಿನ್ನನ್ನು ನೋಡುತ್ತೇನೆ ಮತ್ತು ನನ್ನ ಕಣ್ಣುಗಳು ನಿನ್ನನ್ನು ಮಾತ್ರವೇ ದೃಷ್ಟಿಸುತ್ತವೆ. ತಂದೆಯೇ ನನ್ನ ಜೀವಿತದಲ್ಲಿ ನೀನು ಮಾಡುತ್ತಿರುವ ಕಾರ್ಯಗಳಿಗಾಗಿ ಸ್ತೋತ್ರ. ಯೇಸುವಿನ ನಾಮದಲ್ಲಿ, ಆಮೆನ್.

ಹರಟೆಗಳು ನಡೆಯುವ ಪರಿಸ್ಥಿತಿಗಳ ನಡುವೆಯಿರುವವರಿಗಾಗಿ ಪ್ರಾರ್ಥನೆ

ಪ್ರೀತಿಯುಳ್ಳ ತಂದೆಯೇ, ನಾನು ನನ್ನ ಹೃದಯವನ್ನು ನಿನ್ನ ಮುಂದೆ ಸುರಿಯುತ್ತೇನೆ ಯಾಕಂದರೆ ನೀನು ನನ್ನನ್ನು ಪ್ರೀತಿಸುವೆ ಮತ್ತು ನನಗಾಗಿ ಚಿಂತಿಸುವೆ ಎಂಬದು ನನಗೆ ಗೊತ್ತಿದೆ. ನನ್ನ ಆಂತರಿಕ ಆಲೋಚನೆಗಳು ಮತ್ತು ಭಾವನೆಗಳು ನಿನಗೆ ಗೊತ್ತಿವೆ. ನನ್ನ ವಿಷಯವಾಗಿ ಇವರು (ಜನರ ಹೆಸರು ಅಥವಾ ಪರಿಸ್ಥಿತಿ) ಹಬ್ಬಿಸಿರುವ ವದಂತಿ, ಅಪನಿಂದೆ ಮತ್ತು ಹರಟೆಯ ಮಾತುಗಳಿಂದ ನನಗೆ ನೋವು ಮತ್ತು ವೇದನೆಯಾಗಿದೆ ಎಂಬದು ನಿನಗೆ ಗೊತ್ತಿದೆ. ನಾನು ನನ್ನ ನೋವು ಮತ್ತು ಭಾವನೆಗಳನ್ನು ನಿನಗೆ ಒಪ್ಪಿಸುತ್ತೇನೆ ಹಾಗೂ ನನ್ನ ನೋವನ್ನು ವಾಸಿಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಪವಿತ್ರಾತ್ಮನ ಬಲದಿಂದ ಮತ್ತು ಪ್ರೀತಿ ಮಾಡಲು ಆತನು ನನಗೆ ಕೊಡುವ ಶಕ್ತಿಯಿಂದ, ನನ್ನನ್ನು ನೋಯಿಸಿರುವವರಿಗೆ ನಾನು ಕ್ಷಮಾಪಣೆಯನ್ನು ಬಿಡುಗಡೆ ಮಾಡುತ್ತೇನೆ. ನನ್ನ ಹೃದಯದೊಳಗೆ ಸುರಿಸಲ್ಪಟ್ಟಿರುವ ದೇವರ ಪ್ರೀತಿಯನ್ನು ನಾನು ಅವರಿಗಾಗಿ ಬಿಡುಗಡೆ ಮಾಡುತ್ತೇನೆ. ನೀನು ದೈವೀಕವಾಗಿ ನನ್ನ ಪರವಾಗಿ ಮಧ್ಯಸ್ಥಿಕೆಯನ್ನು ವಹಿಸುವಂತೆ ಮತ್ತು ಈ ವದಂತಿಗಳು, ಹರಟೆ ಮತ್ತು ನಿಂದೆಗಳು ನಿಲ್ಲುವಂತೆ ಮಾಡಬೇಕೆಂದು, ಮತ್ತು ನಿನ್ನ ದಯೆಯಿಂದ ನನ್ನನ್ನು ಆವರಿಸಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ನಿನ್ನ ಘನತೆಯನ್ನು ನನ್ನ ಜೀವಿತದ ಮೇಲಿರಿಸು ಮತ್ತು ನಿನ್ನ ಹಸ್ತವು ನನ್ನನ್ನು ಉದ್ಧರಿಸಲಿ. ಕರ್ತನೇ, ನಾನು ನಿನ್ನನ್ನು ಎದುರುನೋಡುತ್ತೇನೆ ಮತ್ತು ನನ್ನ ಕಣ್ಣುಗಳು ನಿನ್ನ ಮೇಲೆ ಮಾತ್ರವೇ ಅವೆ. ತಂದೆಯೇ ನನ್ನ ಜೀವನದಲ್ಲಿ ನೀನು ಮಾಡುತ್ತಿರುವ ಕೆಲಸಕ್ಕಾಗಿ ಸ್ತೋತ್ರ. ಯೇಸುವಿನ ನಾಮದಲ್ಲಿ, ಆಮೆನ್.

ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು 2000 ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ"* (ರೋಮಾಪುರದವರಿಗೆ 6:23)** ಎಂದು ಹೇಳುತ್ತದೆ. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."* (ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ

ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.

ಆಮೇನ್.

ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ಪಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

- **ಹದಿಹರೆಯದವರು**
- **ವಯಕ್ತಿಕ ಹೊಂದಾಣಿಕೆಗಳು**
- **ಸಂಭಂದಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ / ಮಾದಕವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

ವೆಬ್ಸೈಟ್: chrysalislife.org
ದೂರವಾಣಿ: +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
ಇಮೆಲ್: counselor@chrysalislife.org

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಪ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

ಖಾತೆಯ ಹೆಸರು: All Peoples Church

ಖಾತೆ ಸಂಖ್ಯೆ: 50200068829058

IFSC ಕೋಡ್: HDFC0004367

ಬ್ಯಾಂಕು: HDFC Bank, 7M/308, 80 Ft Road, HRBR Layout, Kalyan Nagar, Bengaluru, Karanataka 560043

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ **apcwo.org/give**.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ.


ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!


DOWNLOAD THE FREE APP!

Search for
"All Peoples Church Bangalore"
in the App or Google play stores.

Available on the App Store

ANDROID APP ON Google play





A daily 5-minute video devotional.
A daily Bible reading and prayer guide.
5-minute Sermon summary.
Toolkit with Scriptures on various topics to build faith and information to share the Gospel.
Resources with sermons, sermon notes, TV programs, books, music and more.

IF YOU LOVE IT, TELL OTHERS ABOUT IT!

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

apcbiblecollege.org

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್-ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ-ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

ಅನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ಹರಟೆ ಮಾತುಗಳನ್ನಾಡುವದು, ಚಾಡಿ ಹೇಳುವದು, ನಿಂದಿಸುವದು ಮತ್ತು ಕಿವಿ ಉದುವದರ ನಕಾರಾತ್ಮಕವಾದ ಪರಿಣಾಮಗಳು ವ್ಯಕ್ತಿಗತವಾಗಿ, ಸಮೂಹಗಳ ಮೇಲೆ, ಕೆಲಸದ ವಾತಾವರದಲ್ಲಿ ಮತ್ತು ಇತರೆ ಸಾಮಾಜಿಕ ರಚನೆಗಳಲ್ಲಿ ಉಂಟಾಗುವದನ್ನು ಗ್ರಹಿಸದೆ ಜನರು ಇವುಗಳಲ್ಲಿ ತೊಡಗಿಸಿಕೊಳ್ಳುತ್ತಾ ಇದ್ದಾರೆ. ಹರಟೆ ಎಂದು ಕರೆಯಲ್ಪಡುವ ಸಣ್ಣ ವಿಷಯದ ನಿಮಿತ್ತವಾಗಿ ಸಾಮಾನ್ಯವಾಗಿ ಜನರು ನೋವುಗಳಿಗೆ ಒಳಗಾಗುತ್ತಿದ್ದಾರೆ, ಸಮೂಹಗಳು ಒಡೆದುಹೋಗುತ್ತಿವೆ ಮತ್ತು ಕೆಲಸದ ವಾತಾವರಣಗಳು ಹಗೆತನ ಸಾಧಿಸುವಂತಾಗಿವೆ ಹಾಗೂ ನಿಷ್ಫಲವಾಗುತ್ತಿವೆ. ಹರಟೆಯು ಕಳೆಯಂತಿದ್ದು ಬೆಳೆಯುತ್ತದೆ ಮತ್ತು ಒಂದುವೇಳೆ ಬೇಗ ಕಿತ್ತು ಬಿಸಾಡದೆ ಹೋದರೆ, ಅದು ಸುಂದರವಾದ ತೋಟವನ್ನೇ ನಾಶಮಾಡುತ್ತದೆ.

ಸರಳವಾಗಿರುವ ಈ ಪುಸ್ತಕವು ಹರಟೆಯ ವಿಷಯವಾಗಿರುವ ಸತ್ಯವೇದಾನುಸಾರವಾದ ಬೋಧನೆಗೆ ನಮ್ಮನ್ನು ಜಾಗೃತರನ್ನಾಗಿಸುತ್ತದೆ, ಈ ಜೀವನಶೈಲಿಯಿಂದ ಹೊರಬರಲು ಸಹಾಯ ಮಾಡುತ್ತದೆ ಮತ್ತು ಹರಟೆಗೆ ಒಳಗಾಗದಂತೆ ದೂರವಿರಲು ಅವಶ್ಯವಾಗಿರುವ ಸುಲಭವಾದಂಥ ಸಹಾಯಕ ಮಾರ್ಗಗಳನ್ನು ತಿಳಿಸುತ್ತದೆ. ಈ ಸಂಪನ್ಮೂಲವು, ಹೇಗಾದರೂ, ಸಂಸ್ಥೆಗಳು ಆರೋಗ್ಯಕರವಾದ ಕೆಲಸದ ವಾತಾವರಣಗಳು ಅಭಿವೃದ್ಧಿಪಡಿಸಿಕೊಳ್ಳಲು, ಶೈಕ್ಷನೀಕ ಸಂಸ್ಥೆಗಳು ಸ್ನೇಹಪೂರ್ವಕ ಮತ್ತು ಬೆಂಬಲಾತ್ಮಕ ವಿದ್ಯಾರ್ಥಿ ಸಂಬಂಧಗಳನ್ನು ಆದರಿಸಲು ಮತ್ತು ಸಮೂಹಗಳಲ್ಲಿರುವ ಜನರು ಒಬ್ಬರ ಮೇಲೊಬ್ಬರು ಪರಸ್ಪರ ಪ್ರೀತಿ ಹಾಗು ಕಾಳಜಿಯುಳ್ಳವರಾಗಿ ನಡೆದುಕೊಳ್ಳಲು ಸಹಾಯ ಮಾಡಲಿ ಎಂಬದು ನಮ್ಮ ನಿರೀಕ್ಷೆಯಾಗಿದೆ.

ಹರಟೆಯು ನಿಲ್ಲಲಿ!

All Peoples Church & World Outreach
319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org